02. ಸಹಕಾರ ಸಂಘಗಳ ಉಪನಿಬಂಧಕರು, ಉತ್ತರ ವಲಯ, ಬೆಂಗಳೂರು ನಗರ ಜಿಲ್ಲೆ ಕಛೇರಿಯಲ್ಲಿ ಅನುಷ್ಠಾನ:ಜಾರಿಗೊಳಿಸುವ ಶಾಸನಗಳು

1. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಹಾಗೂ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960.
2. ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997, ಹಾಗೂ ಕರ್ನಾಟಕ ಸೌಹಾರ್ದ ನಿಯಮಗಳು
3. ಕರ್ನಾಟಕ ಲೇವಾದೇವಿಗಾರರ ಕಾಯ್ದೆ 1961 ಹಾಗೂ ಕರ್ನಾಟಕ ಲೇವಾದೇವಿಗಾರರ ನಿಯಮಗಳು 1965.
4. ಗಿರವಿದಾರರ ಕಾಯ್ದೆ 1961, ಗಿರವಿದಾರರ ನಿಯಮಗಳು 1966.
5. ಚೀಟಿನಿಧಿ ಕಾಯ್ದೆ 1982 ಹಾಗೂ ಚೀಟಿ ನಿಧಿ ನಿಯಮಾವಳಿಗಳು 1983
6. ಕರ್ನಾಟಕ ದುಬಾರಿ ಬಡ್ಡಿ ನಿಷೇದ ಕಾಯ್ದೆ 2004

03. ಸಹಕಾರ ಇಲಾಖೆಯು ತನ್ನ ಗುರಿ ಸಾಧನೆಗೆ ನಿರ್ವಹಿಸುತ್ತಿರುವ ಪ್ರಮುಖ ಕರ್ತವ್ಯಗಳು

1. ಸಹಕಾರ ತತ್ವಗಳ ಪರಿವಿಡಿಯಲ್ಲಿ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳ ರೀತ್ಯಾ ವಿವಿಧ ಸ್ವರೂಪದ ಸಹಕಾರ ಸಂಘಗಳ ಸಂಘಟನೆ ಮತ್ತು ನೋಂದಣಿ ಮಾಡುವುದು
2. .ಸಹಕಾರ ಕಾಯ್ದೆ ನಿಯಮಗಳ ರೀತ್ಯಾ ವಿವಿಧ ಆಡಳಿತಾತ್ಮಕ ,ಶಾಸನಾತ್ಮಕ ಅರೆ ನ್ಯಾಯಿಕ ಕಾರ್ಯಗಳ ನಿರ್ವಹಣೆ.
3. ವಿವಿಧ ರೀತಿಯ ಸಹಕಾರ ಸಂಘಗಳಿಗೆ ವಾರ್ಷಿಕ ಯೋಜನೆಗಳಡಿಯಲಿ ಪಾಲು ಬಂಡವಾಳ, ಸಾಲ ಸಹಾಯಧನ, ಅನುದಾನ ರೂಪದಲ್ಲಿ, ಸರ್ಕಾರದ ಪರವಾಗಿ ಧನಸಹಾಯ ನೀಡುವಿಕೆಗೆ ಕ್ರಮ
4. ದೀನ, ದಲಿತರು, ಅಲ್ಪಸಂಖ್ಯಾತರು, ಪರಿಶಿಷ್ಟ ಜಾತಿ:ಪಂಗಡದ ಜನರು ಸಹಕಾರ ಚಳುವಳಿಯ ಮುಖ್ಯವಾಹಿನಿಗೆ ತರಲು ಅವಶ್ಯ ಕ್ರಮ ಕೈಗೊಳ್ಳುವುದು
5. ಸಹಕಾರ ಸಂಘಗಳ ಕಾಯ್ದೆಯಲ್ಲಿರುವ ಅವಕಾಶಗಳ ರೀತ್ಯಾ ಸಹಕಾರ ಸಂಘಗಳ ಪರಿವೀಕ್ಷಣೆ, ಮೇಲ್ವಿಚಾರಣೆ ತಪ್ಪು ಎಸಗುವ ಸಹಕಾರ ಸಂಘಗಳ ವಿರುದ್ಧ ಕ್ರಮ ಜರುಗಿಸುವುದು.
6. ಸಹಕಾರ ಸಂಘಗಳ ಕಾಯ್ದೆಯ ಅವಕಾಶಗಳ ರೀತ್ಯಾ ವಿನಿಮಯದ (ರೆಗ್ಯುಲೇಷನ್) ಕಾರ್ಯಗಳ ನಿರ್ವಹಣೆ
7. ಸಹಕಾರ ಸಂಘಗಳ ಸಿಬ್ಬಂದಿ, ಸದಸ್ಯರ ನಡುವಿನ ವ್ಯಾಜ್ಯ,ಆಡಳಿತ ಮಂಡಳಿಯ ವಿರುದ್ಧ ದಾವೆಗಳನ್ನು ನ್ಯಾಯಿಕ ಕಲಾಪಗಳ ಮೂಲಕ ಇತ್ಯರ್ಥಪಡಿಸುವುದು.
8. ಸಹಕಾರ ಕಾಯ್ದೆಯಡಿ ನೀಡಲ್ಪಟ್ಟ ತೀರ್ಪು, ಐತೀರ್ಪು, ಆದೇಶ, ನಿರ್ದೇಶನಗಳನ್ನು ಅನುಷ್ಠಾನಗೊಳಿಸುವುದು
9. ತೃಪ್ತಿಕರವಾಗಿ ಕಾರ್ಯನಿರ್ವಹಣೆ, ಸಹಕಾರಿ ಧ್ಯೇಯೋದ್ದೇಶಗಳನ್ನು ಜಾರಿಗೊಳಿಸುವಲ್ಲಿ ವಿಫಲವಾದ ಸಹಕಾರ ಸಂಘಗಳನ್ನು ಸಮಾಪನೆಗೊಳಿಸುವುದು.
10. ಸಹಕಾರ ಕಾಯ್ದೆ, ನಿಯಮಗಳ ಉಲ್ಲಂಘನೆಯಾದ ಸಂದರ್ಭದಲ್ಲಿ ಇಲಾಖಾಧಿಕಾರಿಗಳನ್ನು ಆಡಳಿತಾಧಿಕಾರಿಯನ್ನಾಗಿ ನೇಮಿಸುವುದು ಹಾಗೂ ಆಡಳಿತ ಮಂಡಳಿಯ ಸ್ಥಾನದಲ್ಲಿ ಉನ್ನತಾಧಿಕಾರಿಗಳ ಆದೇಶದ ರೀತ್ಯಾ ಆಡಳಿತಾಧಿಕಾರಿಯಾಗಿ ಕಾರ್ಯನಿರ್ವಹಿಸುವುದು.
11. ಸಹಕಾರ ಸಂಘಗಳಿಗೆ ಹಾಗೂ ಸಹಕಾರಿ ಸದಸ್ಯರುಗಳಿಗೆ ಇಲಾಖಾಧಿಕಾರಿಗಳು ಸ್ನೇಹಿತ, ತತ್ವಜ್ಞಾನಿ ಮತ್ತು ಮಾರ್ಗದರ್ಶಿಯಂತೆ, (ಫ್ರೆಂಡ್, ಫಿಲಾಸಫರ್ಅಂಡ್ ಗೈಡ್) ಸಲಹೆ, ಸೂಚನೆಗಳನ್ನು ನೀಡುವುದು.
12. ಸಹಕಾರ ರಂಗದ ಅಭಿವೃದ್ಧಿಗೆ ಸರ್ಕಾರವು ಮಾಡಿರುವ ನೀತಿ, ಯೋಜನೆ ಇತ್ಯಾದಿಗಳಿಗೆ ಸಹಾಯ ಸಹಕಾರ ನೀಡಿ, ಕಾರ್ಯಗತಗೊಳಿಸುವಲ್ಲಿ ಕ್ರಮ.
13. ಬೆಂಗಳೂರು ನಗರ ಜಿಲ್ಲೆಯ ಉತ್ತರ ವಲಯದ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಪ್ರಾಸಂಗಿಕವಾಗಿ ಅಗತ್ಯವಿರುವ, ಅವಶ್ಯವಿರುವ ಇತರೆ ಎಲ್ಲಾ ಕಾರ್ಯಗಳನ್ನು ಕರ್ತವ್ಯಗಳ ನಿರ್ವಹಿಸುವುದು.
14. ಸರ್ಕಾರದ ಅತ್ಯಂತ ಮುಖ್ಯ ಯೋಜನೆಯಾದ ಯಶಸ್ವಿನಿ ರೈತರ ಆರೋಗ್ಯ ವಿಮಾ ರಕ್ಷಣಾ ಯೋಜನೆಯನ್ನು ಅನುಷ್ಠಾನಗೊಳಿಸಿ ರೈತ ಆರೋಗ್ಯವನ್ನು ಕಾಪಾಡುವುದು.

04. ಬೆಂಗಳೂರು ನಗರ ಜಿಲ್ಲೆ ಉತ್ತರ ವಲಯದ ವ್ಯಾಪ್ತಿಯಲ್ಲಿ ಪ್ರಸಕ್ತ ಅವಧಿಯವರೆಗೆ ಒಟ್ಟು 815.ಸಹಕಾರ ಸಂಘಗಳಿವೆ ವಿವರ ಈ ಕೆಳಕಂಡಂತಿವೆ.

"ಎಲ್ಲರಿಗಾಗಿ ಒಬ್ಬರು ಒಬ್ಬರಿಗಾಗಿ ಎಲ್ಲರೂ " ಎಂಬ ಮಹತ್ವಾಕಾಂಕ್ಷೆಯ ಧ್ಯೇಯೋದ್ದೇಶಗಳೊಂದಿಗೆ ಸಹಕಾರ ಚಳುವಳಿಯನ್ನು ಜಿಲ್ಲೆಯ ಜನತೆಯಲ್ಲಿ ಹಾಸು ಹೊಕ್ಕಾಗಿಸಲು ಕಛೇರಿಯು ಅವಿರತವಾಗಿ ಶ್ರಮಿಸುತ್ತಿದೆ.

ಕ್ರ.ಸಂ	ವಿವಿಧ ಸಹಕಾರ ಸಂಘಗಳು	ದಿ:31-3-2013ಕ್ಕೆ ಇದ್ದಂತೆ ಸಹಕಾರ ಸಂಘಗಳ ಸಂಖ್ಯೆ
01.	ರಾಜ್ಯಮಟ್ಟದ ಸಹಕಾರ ಸಂಘಗಳು	02
02.	ಜಿಲ್ಲಾ ಸಹಕಾರ ಒಕ್ಕೂಟ	01
03	ಪ್ರಾಥಮಿಕ ಕೃಷಿ ಗ್ರಾಮೀಣಾಭಿವೃದ್ಧಿ ಬ್ಯಾಂಕ್	01
04	ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು	25
05	ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿ.,	01

ಕ್ರ.ಸಂ	ವಿವಿಧ ಸಹಕಾರ ಸಂಘಗಳು	ದಿ:31–3–2013ಕ್ಕೆ ಇದ್ದಂತೆ ಸಹಕಾರ ಸಂಘಗಳ ಸಂಖ್ಯೆ
06	ಹಾಲು ಉತ್ಪಾದಕರ ಸಹಕಾರ ಸಂಘಗಳು	232
07	ಕೃಷಿಯೇತರ ಪತ್ತಿನ ಸಹಕಾರ ಸಂಘಗಳು	156
08	ಗೃಹ ನಿರ್ಮಾಣ ಸಹಕಾರ ಸಂಘಗಳು	163
09	ಲೈವ್ ಸ್ಟಾಕ್ ಸಹಕಾರ ಸಂಘಗಳು	02
10	ಪಟ್ಟಣ ಸಹಕಾರ ಬ್ಯಾಂಕುಗಳು	12
11	ನೌಕರರ ಪತ್ತಿನ ಸಹಕಾರ ಸಂಘಗಳು	48
12	ಕೂಲಿಕಾರರ ಸಹಕಾರ ಸಂಘಗಳು	01
13	ಮಹಿಳೆಯರ ವಿವಿದೋದ್ದೇಶ ಸಹಕಾರ ಸಂಘಗಳು	33
14	ವಿವಿದೋದ್ದೇಶ ಸಹಕಾರ ಸಂಘಗಳು	11
15	ಬಳಕೆದಾರರ ಸಹಕಾರ ಸಂಘಗಳು	61
16	ದರ್ಜಿಗಳ ಸಹಕಾರ ಸಂಘಗಳು	02
17	ಮಡಿವಾಳಗಾರರ ಸಹಕಾರ ಸಂಘಗಳು	02
18	ಮುದ್ರಣಾಲಯದ ಸಹಕಾರ ಸಂಘಗಳು	02
19	ನೀರು ಬಳಕೆದಾರರ ಸಹಕಾರ ಸಂಘಗಳು	09
20	ಮೀನುಗಾರರ ಸಹಕಾರ ಸಂಘಗಳು	15
21	ನೇಕಾರರ ಸಹಕಾರ ಸಂಘಗಳು	22
22	ಸಗಟು ಮಾರಾಟ ಸಹಕಾರ ಸಂಘಗಳು	2
23	ಕೈಗಾರಿಕಾ ಸಹಕಾರ ಸಂಘಗಳು	10
24	ಇತರೆ ಸಹಕಾರ ಸಂಘಗಳು	02
	ಒಟ್ಟು	**815**

ಒಟ್ಟು 815 ಸಹಕಾರ ಸಂಘಗಳು ಇದ್ದು, ಬೆಂಗಳೂರು ನಗರದ ಜನಜೀವನದಲ್ಲಿ ಸಹಕಾರ ಚಳವಳಿಯು ಹಾಸುಹೊಕ್ಕಾಗಿರುತ್ತದೆ.

05. ಜಿಲ್ಲೆಯಲ್ಲಿ ಸಹಕಾರ ಇಲಾಖಾ ಕಚೇರಿಗಳ ಸಂರಚನೆ, ಆಡಳಿತದ ವಿವಿಧ ಹಂತಗಳು

01. ಸಹಕಾರ ಸಂಘಗಳ ಉಪನಿಬಂಧಕರು ಉತ್ತರ ವಲಯ ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು

02. ಸಹಕಾರ ಸಂಘಗಳ ಸಹಾಯಕ ನಿಬಂಧಕರು ಉತ್ತರ ವಲಯ ವೃತ್ತ ಬೆಂಗಳೂರು

05.01. ಈ ಮೇಲ್ಕಂಡ ಅದಿಕಾರಿಗಳಲ್ಲದೇ ಈ ಕೆಳಕಂಡ ವೃಂದದ ಸಿಬ್ಬಂದಿ ವರ್ಗವು ಸಹ ಕಾರ್ಯನಿರ್ವಹಿಸುತ್ತಿರುತ್ತಾರೆ.

1. ಸಹಕಾರ ಅಭಿವೃದ್ಧಿ ಅಧಿಕಾರಿಗಳು
2. ಅಧೀಕ್ಷಕರು
3. ಮಾರಾಟಾಧಿಕಾರಿ
4. ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು
5. ಸಹಕಾರ ಸಂಘಗಳ ನಿರೀಕ್ಷಕರು
6. ಪ್ರಥಮ ದರ್ಜೆ ಸಹಾಯಕರು
7. ಶೀಘ್ರಲಿಪಿಗಾರರು,
8. ಹಿರಿಯ ಬೆರಳಚ್ಚುಗಾರರು
9. ದ್ವಿತೀಯ ದರ್ಜೆ ಸಹಾಯಕರು
10. ಬೆರಳಚ್ಚುಗಾರರು
11. ವಾಹನ ಚಾಲಕರು
12. ಡಿ ದರ್ಜೆ ನೌಕರರು: ಜಾರಿಗಾರರು

ಒಟ್ಟಾರೆ ಬೆಂಗಳೂರು ನಗರ ಜಿಲ್ಲೆ ಉತ್ತರ ವಲಯದ ವ್ಯಾಪ್ತಿಯ ಇಲಾಖಾ ಕಛೇರಿಗಳಲ್ಲಿ ತಹಲ್‌ವರೆವಿಗೂ ಮಂಜೂರಾಗಿರುವ ಹುದ್ದೆಗಳು ಹಾಗೂ ಕಾರ್ಯನಿರತ ಸಿಬ್ಬಂದಿ ಸಂಖ್ಯೆ , ಖಾಲಿ ಇರುವ ಹುದ್ದೆಗಳ ವಿವರಗಳು ಕೆಳಕಂಡಂತಿರುತ್ತವೆ.

ಕ್ರಮ ಸಂ.	ಹುದ್ದೆಯ ಹೆಸರು	ಮಂಜೂರಾದ ಹುದ್ದೆ	ಕಾರ್ಯ ನಿರತ ಹುದ್ದೆ	ಖಾಲಿಹುದ್ದೆ
ಸಹಕಾರ ಸಂಘಗಳ ಉಪನಿಬಂಧಕರು, ಉತ್ತರ ವಲಯ, ಬೆಂಗಳೂರು ನಗರ ಜಿಲ್ಲೆ ಬೆಂಗಳೂರು ಇವರ ಕಛೇರಿ				
01	ಸಹಕಾರ ಸಂಘಗಳ ಉಪನಿಬಂಧಕರು	01	01	–
02	ಸಹಕಾರ ಅಭಿವೃದ್ಧಿ ಅಧಿಕಾರಿ	02	02	–
03	ಅಧೀಕ್ಷಕರು	01	01	–
04	ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು	02	02	–
05	ಸಹಕಾರ ಸಂಘಗಳ ನಿರೀಕ್ಷಕರು	03	01	02
06	ಪ್ರಥಮ ದರ್ಜೆ ಸಹಾಯಕರು	03	02	01
07	ಶೀಘ್ರಲಿಪಿಗಾರರು	01	–	01
08	ಹಿರಿಯ ಬೆರಳಚ್ಚುಗಾರರು	01	01	–
09	ದ್ವಿತಿಯ ದರ್ಜೆ ಸಹಾಯಕರು	01	01	–
10	ವಾಹನ ಚಾಲಕರು	01	01	–
11	ಡಿ. ದರ್ಜೆ ನೌಕರರು	02	–	02
	ಒಟ್ಟು	**18**	**12**	**06**
2. ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಉತ್ತರ ವಲಯ ವೃತ್ತ ರವರ ಕಛೇರಿ, ಬೆಂಗಳೂರು				
01	ಸಹಕಾರ ಸಂಘಗಳ ಸಹಾಯಕ ನಿಬಂಧಕರು	01	01	–
02	ಮಾರಾಟಾಧಿಕಾರಿ	01	01	–
03	ಅಧೀಕ್ಷಕರು	01	01	–
04	ಸಹಕಾರ ಸಂಘಗಳ ನಿರೀಕ್ಷಕರು	04	02	02
05	ದ್ವಿತಿಯ ದರ್ಜೆ ಸಹಾಯಕರು	03	03	–
06	ಬೆರಳಚ್ಚುಗಾರರು	01	01	–
07	ವಾಹನಚಾಲಕರು	01	–	01
08	ಜಾರಿಗಾರರು	01	01	–
09	ಡಿ ದರ್ಜೆ ನೌಕರರು	03	0	03
	ಒಟ್ಟು	**16**	**10**	**06**

ಈ ಮೇಲಿನಂತೆ ಸಹಕಾರ ಇಲಾಖೆಯ ಬೆಂಗಳೂರು ನಗರ ಜಿಲ್ಲೆ ಉತ್ತರ ವಲಯದ ವ್ಯಾಪ್ತಿಯಲ್ಲಿ ಇಲಾಖಾ ಕಛೇರಿಗಳ ಸಂರಚನೆಯ ನಕ್ಷೆಯು ಸಮಷ್ಟಿಯಾಗಿ ಆಡಳಿತಾತ್ಮಕ ರಚನೆಯನ್ನು ಸ್ಪಷ್ಟಪಡಿಸುತ್ತದೆ.

6. ಜಿಲ್ಲೆಯಲ್ಲಿ ಒಟ್ಟು 2 ಹಂತಗಳಲ್ಲಿ ಸಂಘಟಿತವಾಗಿದೆ. ಈ ಹಂತಗಳು ಯಾವುವೆಂದರೆ ಜಿಲ್ಲಾ ಮಟ್ಟ, ಉಪವಿಭಾಗೀಯ ಮಟ್ಟ, ಇಲಾಖೆಯ ಆಡಳಿತಾತ್ಮಕ ಕಾರ್ಯಗಳನ್ನು ಜಾರಿಗೆ ತರುವ ಮೂಲಕ ಆಡಳಿತಾತ್ಮಕ ಮೇಲ್ವಿಚಾರಣೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

6.01 ಸಹಕಾರ ಸಂಘಗಳ ಉಪನಿಬಂದಕರು ಉತ್ತರ ವಲಯ ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಇವರು ಜಿಲ್ಲಾ ಮಟ್ಟದ ಅಧಿಕಾರಿಯಾಗಿದ್ದು, ಇವರು ಲೇವಾದೇವಿ, ಗಿರವಿ ಹಾಗೂ ಚೀಟಿನಿಧಿಗಳ ನಿಬಂಧಕರು, ಸಹ ಆಗಿರುತ್ತಾರೆ. ಇವರು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959, ಕರ್ನಾಟಕ ಲೇವಾದೇವಿಗಾರರ ಕಾಯ್ದೆ & ಗಿರವಿದಾರರ ಕಾಯ್ದೆ & ಚೀಟಿನಿಧಿಗಳ ಕಾಯ್ದೆಗಳ ಶಾಸನಾತ್ಮಕ ಅಧಿಕಾರಗಳನ್ನು ಚಲಾಯಿಸುವ ಅಧಿಕಾರ ಹೊಂದಿರುತ್ತಾರೆ. ಸಹಕಾರ ಸಂಘಗಳಲ್ಲಿನ ಆಡಳಿತ ಮಂಡಳಿಗಳಲ್ಲಿ ಸರ್ಕಾರದ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

6.02. ಸಹಕಾರ ಸಂಘಗಳ ಉಪನಿಬಂಧಕರು ಉತ್ತರ ವಲಯ ಬೆಂಗಳೂರು ನಗರ ಜಿಲ್ಲೆ ಇವರ ಅಧೀನದಲ್ಲಿ ಬೆಂಗಳೂರು ಉತ್ತರ ವಲಯ ವೃತ್ತಕ್ಕೆ ಉಪವಿಭಾಗಿಯ ಮಟ್ಟದ ಅಧಿಕಾರಿಗಳಾಗಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಇದ್ದು, ಇವರಿಗೆ ಸರ್ಕಾರದ ಆದೇಶದನ್ವಯ ಅಧಿಕಾರ ಪ್ರತ್ಯಾಯೋಜನೆಯಾಗಿರುತ್ತದೆ. ಇವರ ಅಧಿಕಾರ ವ್ಯಾಪ್ತಿಗೆ ಬರುವ ಸಹಕಾರ ಸಂಘಗಳ ಮೇಲೆ ಹಾಗೂ ಗಿರವಿ, ಹಣಕಾಸು ಚೀಟಿ ಸಂಸ್ಥೆಗಳ ಶಾಸನಾತ್ಮಕ ಹಾಗೂ ಆಡಳಿತಾತ್ಮಕ ನಿಯಂತ್ರಣ ಹೊಂದಿರುತ್ತಾರೆ. ಅದೇ ರೀತಿ ಸಹಕಾರ ಸಂಘಗಳ ಸಂಯೋಜನೆ, ಸಮಾಪನೆ, ಉಪನಿಯಮಗಳ ತಿದ್ದುಪಡಿ, ಪರಿವೀಕ್ಷಣೆ, ನಿರೀಕ್ಷಣೆಗಳ ಜೊತೆಗೆ ಅರೆ ನ್ಯಾಯಿಕ ಕಲಾಪ ಹಾಗೂ ಶಾಸನಗಳು ನೀಡಿರುವ ಆದೇಶದ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ.

6.03 ರಾಜ್ಯ ಯೋಜನೆಗಳು, ಕೇಂದ್ರ ಪುರಸ್ಕೃತ ಯೋಜನೆಗಳನ್ನು ಅನುಷ್ಠಾನಗೊಳಿಸುವ ಜೊತೆಗೆ, ಜಿಲ್ಲಾ ಪಂಚಾಯಿತಿಯ ಯೋಜನೆಗಳನ್ನು ಜಾರಿಗೊಳಿಸುವ ಸಂದರ್ಭದಲ್ಲಿ ಬೆಂಗಳೂರು ನಗರ ಜಿಲ್ಲೆಯ ಉತ್ತರ ವಲಯ, ಸಹಕಾರ ಸಂಘಗಳ ಉಪನಿಬಂಧಕರು ಜಿಲ್ಲಾ ಪಂಚಾಯತ್ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುತ್ತಾರೆ. ಉಪವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಉತ್ತರ ವಲಯ ವೃತ್ತ ರವರು ರಾಜ್ಯ ಸರ್ಕಾರದ

ಮತ್ತು ಜಿಲ್ಲಾ ಪಂಚಾಯತ್ ತಾಲ್ಲೂಕು ಪಂಚಾಯತ್ ಯೋಜನೆಗಳ ಅನುಷ್ಠಾನದ ಹೊಣೆಯನ್ನು ಹೊಂದಿರುತ್ತಾರೆ. ಅಲ್ಲದೇ ಇಲಾಖಾ ಮುಖ್ಯಸ್ಥರು ಹಾಗೂ ಪ್ರಾಂತೀಯ ಅಧಿಕಾರಿಗಳ ಅಧೀನದಲ್ಲಿ ಜಿಲ್ಲಾ, ಉಪವಿಭಾಗದ ಹಂತದಲ್ಲಿ ಕ್ಷೇತ್ರೀಯ ಸಿಬ್ಬಂದಿ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಾರೆ.

6.04 ಈ ಸಂರಚನೆಯು ಇಲಾಖೆಯ ಧ್ಯೇಯ–ಉದ್ದೇಶಗಳನ್ನು ಗುರಿಸಾಧಿಸಲು ಮಾರ್ಗೋಪಾಯವಾಗಿದೆ. ಇಲಾಖೆಯ ಜಿಲ್ಲಾಡಳಿತ ಯಂತ್ರವು ತಂಡದ ಸ್ವರೂಪದಲ್ಲಿ ಕಾರ್ಯನಿರ್ವಹಿಸುತ್ತದೆ. ಸಮರ್ಪಕವಾಗಿ ಹಾಗೂ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿ, ಇಲಾಖೆಯ ಧ್ಯೇಯ–ಉದ್ದೇಶಗಳನ್ನು ಜಾರಿಗೊಳಿಸಲು ಕೆಲಸಗಳನ್ನು ವಿಂಗಡಣೆ ಮಾಡಿಕೊಂಡು ತಂಡದೋಪಾದಿಯಲ್ಲಿ ನಿರ್ವಹಿಸುತ್ತಿದೆ.

ಕಛೇರಿಯ ಪ್ರತಿಯೊಬ್ಬ ಸದಸ್ಯರು(ನೌಕರರು–ಅಧಿಕಾರಿಗಳು) ತನ್ನ ನಿರ್ಧಿಷ್ಟ ಪಾತ್ರವನ್ನು ಅರಿತು ತಮ್ಮ ತಮ್ಮ ಕರ್ತವ್ಯಗಳು, ವಹಿಸಿರುವ ಜವಾಬ್ದಾರಿಗಳು, ಅಧಿಕಾರ ಪತ್ರಾಯೋಜನೆಯ ರೀತ್ಯಾ ಪರಸ್ಪರ ಪೂರಕವಾಗಿ ನಿರ್ವಹಿಸುವ ಮೂಲಕ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

6.05. ಜಿಲ್ಲಾ ಮುಖ್ಯಸ್ಥರಾದ ಸಹಕಾರ ಸಂಘಗಳ ಉಪನಿಬಂಧಕರು ಇಲಾಖಾ ಮುಖ್ಯಸ್ಥರು ಹಾಗೂ ಮೇಲಧಿಕಾರಿಗಳ ಮಾರ್ಗದರ್ಶನ ಹಾಗೂ ನಿರ್ದೇಶನಗಳಿಗನುಗುಣವಾಗಿ ಇಲಾಖೆಯ ಸಿಬ್ಬಂದಿಯೊಂದಿಗೆ ಸಮನ್ವಯತೆಯನ್ನು ಸಾಧಿಸಿ ಸುಲಲಿತ ಆಡಳಿತ ವ್ಯವಸ್ಥೆಯನ್ನು ಜಾರಿಗೊಳಿಸಲಾಗುತ್ತದೆ.

7. ಸಹಕಾರ ಸಂಘಗಳ ಉಪನಿಬಂಧಕರು ಹಾಗೂ ಅವರ ಕಛೇರಿಯ ಅಧಿಕಾರಿ, ನೌಕರರ ಅಧಿಕಾರಿ ಮತ್ತು ಕರ್ತವ್ಯಗಳು :

ಇಲಾಖೆಯ ಸಂರಚನೆಯ ನಕ್ಷೆಯಲ್ಲಿ ಅಧಿಕಾರದ ಶ್ರೇಣಿಕೃತ ವ್ಯವಸ್ಥೆಯನ್ನು ವೀಕ್ಷಿಸಬಹುದು. ಆ ಪ್ರಕಾರ ಸಹಕಾರ ಸಂಘಗಳ ಉಪನಿಬಂಧಕರ ಕಛೇರಿಯಲ್ಲಿ ಅಧಿಕಾರಿಗಳು ನೌಕರರ ಆಡಳಿತಾತ್ಮಕ ಸ್ಥಾನ ಮತ್ತು ಅಧಿಕಾರ ಮತ್ತು ಕರ್ತವ್ಯಗಳನ್ನು ಈ ಕೆಳಕಂಡಂತೆ ಇರುತ್ತದೆ.

7.01 ಸಹಕಾರ ಸಂಘಗಳ ಉಪನಿಬಂಧಕರು, ಉತ್ತರ ವಲಯ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

ಸಹಕಾರ ಸಂಘಗಳ ಉಪನಿಬಂಧಕರು ಉತ್ತರ ವಲಯ, ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಜಿಲ್ಲಾ ಮಟ್ಟದ **"ಎ"** ವರ್ಗದ ಅಧಿಕಾರಿಗಳಾಗಿದ್ದು, ಇವರು ಇಲಾಖಾ ಮುಖ್ಯಸ್ಥರಾದ ಸಹಕಾರ ಸಂಘಗಳ ನಿಬಂಧಕರು, ಹಾಗೂ ಕೇಂದ್ರ ಕಛೇರಿಯ ಉನ್ನತ ಅಧಿಕಾರಿಗಳು ಮತ್ತು ಪ್ರಾಂತ ಮಟ್ಟದ ಅಧಿಕಾರಿಗಳಾದ ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು, ಬೆಂಗಳೂರು ಪ್ರಾಂತ, ಬೆಂಗಳೂರು ಇವರ ಮಾರ್ಗದರ್ಶನ ಹಾಗೂ ನಿರ್ದೇಶನಗಳಿಗನುಗುಣವಾಗಿ, ಸರ್ಕಾರದ ಸಹಕಾರ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುವುದು, ಈ ಮೇಲಿನ ಕಾಯ್ದೆಗಳಲ್ಲಿ ನಿರ್ಧಿಷ್ಟಪಡಿಸಿರುವ ಅಧಿಕಾರ ಮತ್ತು ಕರ್ತವ್ಯಗಳನ್ನು ನಿರ್ವಹಣೆ ಮಾಡುತ್ತಾರೆ.

7.02 ಸಹಕಾರ ಇಲಾಖೆಯಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳಾಗಿದ್ದು, ಜಿಲ್ಲಾ ಮಟ್ಟದ ಅಧಿಕಾರವನ್ನು ಹೊಂದಿರುತ್ತಾರೆ. ಇವರು ಆಡಳಿತಾತ್ಮಕ, ಶಾಸನಾತ್ಮಕ ಕಾರ್ಯಗಳನ್ನು ನಿರ್ವಹಿಸುವುದರ ಜೊತೆಗೆ ಅಭಿವೃದ್ಧಿಗೆ ಅಗತ್ಯವಿರುವ ಪೂರಕ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ.

ಇವರು ಈ ಕೆಳಕಂಡ ಕಾಯ್ದೆಗಳಲ್ಲಿ ಹಂಚಿಕೆ ಮಾಡಿರುವ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ.

1. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959, ಮತ್ತು ಸಹಕಾರ ಸಂಘಗಳ ನಿಯಮಗಳು 1960.
2. ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997, ಹಾಗೂ ಕರ್ನಾಟಕ ಸೌಹಾರ್ದ ಸಹಕಾರ ನಿಯಮಾವಳಿಗಳು
3. ಕರ್ನಾಟಕ ಲೇವಾದೇವಿ ಕಾಯ್ದೆ 1961 ಮತ್ತು ಕರ್ನಾಟಕ ಲೇವಾದೇವಿ ನಿಯಮಾವಳಿಗಳು 1965.
4. .ಕರ್ನಾಟಕ ಗಿರವಿದಾರರ ಕಾಯ್ದೆ 1961 ಮತ್ತು ಕರ್ನಾಟಕ ಗಿರವಿ ನಿಯಮಗಳು 1966
5. ಚೀಟಿ ನಿಧಿ ಕಾಯ್ದೆ 1982 ಮತ್ತು ಚೀಟಿ ನಿಧಿ ನಿಯಮಗಳು 1983
6. ಜಿಲ್ಲೆಯ ಎಲ್ಲಾ ನೌಕರರ ಸೇವಾ ವಿಷಯಗಳಾದ, ಬಡ್ತಿ, ರಜೆ, ನಿವೃತ್ತಿ, ನಿಯಂತ್ರಣ, ನಿರ್ದೇಶನ ಹಾಗೂ ಶಿಸ್ತು ಕ್ರಮದ ಬಗ್ಗೆ ಪ್ರತ್ಯಾಯೋಜಿತವಾದ ಅಧಿಕಾರದಂತೆ ಕ್ರಮ.
7. ಜಿಲ್ಲೆಯ ಸಹಕಾರ ಇಲಾಖೆಯ ಸಾಮಾನ್ಯ ಆಡಳಿತದ ಮೇಲ್ವಿಚಾರಣೆ
8. ವಿವಿಧ ಯೋಜನೆಗಳ ಅನುಷ್ಠಾನ, ಇಲಾಖಾ ಮುಖ್ಯಸ್ಥರು ನೀಡುವ ಅನುಧಾನಗಳನ್ನು ಸಮರ್ಪಕವಾಗಿ ಸದ್ಬಳಕೆ ಬಗ್ಗೆ, ನೀಡಿದ ಭೌತಿಕ ಗುರಿಗೆ ಅನುಗುಣವಾಗಿ ಸಾಧನೆಗೆ ಕ್ರಮ .
9. ಜಿಲ್ಲೆಯ ಅಂಕಿ ಅಂಶಗಳ ನಿರ್ವಹಣೆ, ಸರ್ಕಾರವು ಸಹಕಾರ ಸಂಘಗಳಿಗೆ ನೀಡುವ ಷೇರು, ಸಾಲ, ಸಹಾಯದನದ ಸದ್ಬಳಕೆ ಬಗ್ಗೆ ಮೇಲ್ವಿಚಾರಣೆ ಹಾಗೂ ರೀಡಿಮೆಬಲ್ ಷೇರು ಮತ್ತು ಸರ್ಕಾರಿ ಸಾಲದ ವಸೂಲಾತಿಯ ಮೇಲ್ವಿಚಾರಣೆ.
10. ತಾಲ್ಲೂಕು ಮಟ್ಟ ಹಾಗೂ ಜಿಲ್ಲಾ ಮಟ್ಟದ ಒಳಪಟ್ಟಿರುವ ಜಿಲ್ಲಾ ವ್ಯಾಪ್ತಿಯಲ್ಲಿರುವ ಎಲ್ಲಾ ವಿಧದ ಸಹಕಾರ ಸಂಘಗಳ ಮೇಲ್ವಿಚಾರಣೆ, ವ್ಯಾಜ್ಯಗಳ ವಿಚಾರಣೆ ಹಾಗೂ ಇತ್ಯರ್ಥ.
11. ತಾಲ್ಲೂಕು ಮಟ್ಟ ಹಾಗೂ ಬೆಂಗಳೂರು ಉತ್ತರ ವಲಯ ವ್ಯಾಪ್ತಿಗೆ ಒಳಪಟ್ಟಿರುವ ಅಧಿಕಾರ ಪ್ರತ್ಯಾಯೋಜಿತ ವಿವಿಧ ಸಹಕಾರ ಸಂಘಗಳಿಗೆ ಸಂಬಂಧಪಟ್ಟಂತೆ ಸಹಕಾರ ಸಂಘಗಳ ಕಾಯ್ದೆ ಹಾಗೂ ಸೌಹಾರ್ದ ಕಾಯ್ದೆಯಡಿ ಸಹಕಾರ ಸಂಘಗಳು ಹಾಗೂ ಸೌಹಾರ್ದ ಸಹಕಾರಿಗಳ ನೋಂದಣಿ ಕಾರ್ಯಗಳು, ಮತ್ತು ಸಂಬಂಧಪಟ್ಟ ಸಂಘಗಳ ಉಪನಿಯಮಗಳ ತಿದ್ದುಪಡಿ ನೋಂದಣಿ ಕಾರ್ಯ.
12. ಯಶಸ್ವಿನಿ ರೈತರ ಆರೋಗ್ಯ ರಕ್ಷಣಾ ವಿಮಾ ಯೋಜನೆಯ ಅನುಷ್ಠಾನ ಹಾಗೂ ಆ ಮೂಲಕ ರೈತ ಫಲಾನುಭವಿ ಸದಸ್ಯರುಗಳಿಗೆ ಪ್ರಾಯೋಜಕತ್ವದ ಬಗ್ಗೆ ಮೇಲ್ವಿಚಾರಣೆ .

7.03 ಇವರ ಅಧಿಕಾರದ ಕಾರ್ಯವ್ಯಾಪ್ತಿಯಲ್ಲಿ ಆಡಳಿತಾತ್ಮಕ ಕಾರ್ಯನಿರ್ವಹಿಸುವ ಕಾರ್ಯರಚನೆಯ ವಿವರಗಳು

ಸಹಕಾರ ಸಂಘಗಳ ಉಪನಿಬಂಧಕರು, ಉತ್ತರ ವಲಯ, ಬೆಂಗಳೂರು ನಗರ ಜಿಲ್ಲೆ ಬೆಂಗಳೂರು ಸಹಕಾರಿಗಳ ಉಪನಿಬಂಧಕರು, ಲೇವಾದೇವಿಗಾರರ ನಿಬಂಧಕರು , ಗಿರವಿದಾರರ ನಿಬಂಧಕರು,

ಚೀಟಿ ನಿಧಿಗಳ ನಿಬಂಧಕರು.

1

ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ಲೇವಾದೇವಿಗಾರರ ಸಹಾಯಕ ನಿಬಂಧಕರು, ಗಿರವಿದಾರರ ಸಹಾಯಕ ನಿಬಂಧಕರು, ಸಹಕಾರಿಗಳ ಸಹಾಯಕ ನಿಬಂಧಕರು, ಉತ್ತರ ವಲಯ ವೃತ್ತ, ಬೆಂಗಳೂರು

ಸಹಕಾರ ಅಭಿವೃದ್ಧಿ ಅಧಿಕಾರಿಗಳು

ಅಧೀಕ್ಷಕರು

ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು

ಸಹಕಾರ ಸಂಘಗಳ ನಿರೀಕ್ಷಕರು

ವಿಷಯ ನಿರ್ವಾಹಕರು

7.04 ಸಹಕಾರ ಸಂಘಗಳ ಉಪನಿಬಂಧಕರು ಉತ್ತರ ವಲಯ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಇವರ ಕಛೇರಿಯಲ್ಲಿ ಈ ಕೆಳಕಂಡಂತೆ ಸಿಬ್ಬಂದಿ ವರ್ಗದವರುಗಳಿರುತ್ತಾರೆ.

1. ಅಧೀಕ್ಷಕರು
2 ಸಹಕಾರ ಅಭಿವೃದ್ಧಿ ಅಧಿಕಾರಿಗಳು
3.ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು
4. ಸಹಕಾರ ಸಂಘಗಳ ನಿರೀಕ್ಷಕರು
5. ಪ್ರಥಮ ದರ್ಜೆ ಸಹಾಯಕರು
6. ದ್ವಿತೀಯ ದರ್ಜೆ ಸಹಾಯಕರು
7. ಶೀಘ್ರಲಿಪಿಗಾರರು
8. ಹಿರಿಯ ಬೆರಳಚ್ಚುಗಾರರು
9. ವಾಹನ ಚಾಲಕರು ಹಾಗೂ ಡಿ ದರ್ಜೆ ನೌಕರರು

7.04.01 ಈ ಸಿಬ್ಬಂದಿಗಳ ವಿವರ, ಕಾರ್ಯನಿರ್ವಹಣೆ , ವಿವರ
ಅನುಬಂಧ-1, ಅನುಬಂಧ-2(ಎ) ರಂತೆ ಇವೆ

7.05 ಕ್ಷೇತ್ರೀಯ ಮಟ್ಟದಲ್ಲಿ

01. ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಉತ್ತರ ವಲಯ, ವೃತ್ತ ,ಬೆಂಗಳೂರು ಹಾಗೂ ಲೇವಾದೇವಿಗಾರರ ಸಹಾಯಕ ನಿಬಂಧಕರು ಗಿರವಿದಾರರ ಸಹಾಯಕ ನಿಬಂಧಕರು ,ಚೀಟಿ ನಿಧಿಗಳ ಸಹಾಯಕ ನಿಬಂಧಕರು ಮತ್ತು ಸಹಕಾರಿಗಳ ಸಹಾಯಕ ನಿಬಂಧಕರು, ಉತ್ತರ ವಲಯ ವೃತ್ತ, ಬೆಂಗಳೂರು

7.06 ಈ ಕಛೇರಿಗಳಲ್ಲಿ ಆಡಳಿತಾತ್ಮಕ ಕಾರ್ಯರಚನೆ ಈ ಕೆಳಕಂಡಂತಿದೆ.(ಅನುಬಂಧ-2ಬಿ)

(1) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಬೆಂಗಳೂರು ಉತ್ತರ ವಲಯ ವೃತ್ತ , ಬೆಂಗಳೂರು.

1. ಅಧೀಕ್ಷಕರು
2 ಮಾರಾಟಾಧಿಕಾರಿ(ಸರ್ಕಾರಿ)
3. ಸಹಕಾರ ಸಂಘಗಳ ನಿರೀಕ್ಷಕರು
4. ದ್ವಿತೀಯ ದರ್ಜೆ ಸಹಾಯಕರು
5 ಬೆರಳಚ್ಚುಗಾರರು
6 ವಾಹನ ಚಾಲಕರು
7. :ಜಾರಿಗಾರರು , "ಡಿ"ದರ್ಜೆ ನೌಕರರು

8. **ಮೇಲ್ವಿಚಾರಣೆಯ ಅಂಶಗಳು ಮತ್ತು ಜವಾಬ್ದಾರಿಯು ಸೇರಿದಂತೆ ತೀರ್ಮಾನ ಕೈಗೊಳ್ಳುವ ನಡವಳಿಯಲ್ಲಿ ಅನುಸರಿಸುವ ವಿಧಾನ:**

8.01.(1) ಸಹಕಾರ ಸಂಘಗಳ ಉಪನಿಬಂಧಕರು ಉತ್ತರ ವಲಯ, ಬೆಂಗಳೂರು ನಗರ ಜಿಲ್ಲೆ ಇವರು ಜಿಲ್ಲಾ ಮಟ್ಟದಲ್ಲಿ ಸರ್ಕಾರದ ಆದೇಶ ಸಂ.ಸಿಓ/139/ಸಿಎಲ್ಎಂ/2010 ದಿನಾಂಕ: 17-02-2011ರ ಕ್ರಮ ಸಂಖ್ಯೆ: V ರಲ್ಲಿ ದತ್ತವಾದ ಅಧಿಕಾರದನ್ವಯ

(i) ತಾಲ್ಲೂಕು ಮಟ್ಟಕ್ಕೆ ಕಡಿಮೆಯಲ್ಲದ ಉಪನಿಬಂಧಕರ ಕಾರ್ಯವ್ಯಾಪ್ತಿಯಲ್ಲಿ ನೆಲೆಸಿರುವ ಎಲ್ಲಾ ಸಹಕಾರ ಸಂಘಗಳು ಕಲಂ 14, 14ಬಿ, 30, 72, 72ಎ, 73, 74, 75, 98ಪಿ (2)& 118 ನಿಯಮ 18, 22(1)(ಎ), 24(2)(ಎ) & 33.

(ii) ತಾಲ್ಲೂಕು ಮಟ್ಟ ಮತ್ತು ಉಪನಿಬಂಧಕರ ಕಾರ್ಯವ್ಯಾಪ್ತಿಯಲ್ಲಿ ನೆಲೆಸಿರುವ ಎಲ್ಲಾ ಸಹಕಾರ ಸಂಘಗಳು(ಸಕ್ಕರೆ ಮತ್ತು ನೀರು ಬಳಕೆದಾರರ ಸಹಕಾರ ಸಂಘಗಳನ್ನು ಹೊರತುಪಡಿಸಿ) ಕಲಂ 6, 7, 8 10, 12, 14, 14ಬಿ, 16, 17 ,27, 28, 28ಎ (5), 29ಸಿ, 29ಎಫ್ (7) & (8), 29ಜಿ (6), 31, 31ಎ, 58(ಇ), 64(4ಎ), (5)&(7), 64, 65, 65ಎ, 67, 68, 69, 70, 70, 71, 103, 104, 105ಎ, 110ಎ, 111, 113, 117, 125, & 128ಬಿ, ನಿಯಮಗಳು 3, 6, 14(1), 14ಬಿ, 14ಡಿ, 14ಇ, 23, 26, 31, 50, 52, 53, & 56 ಎಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳು (ಅಮಾನತ್ ಸಹಕಾರ ಬ್ಯಾಂಕ್, ಬೆಂಗಳೂರು ಹೊರತುಪಡಿಸಿ) ಉಪನಿಬಂಧಕರ ಕಾರ್ಯವ್ಯಾಪ್ತಿಯಲ್ಲಿ ನೆಲೆಸಿರುವ ಕೇಂದ್ರ ಕಛೇರಿಯಿಂದ ನೋಂದಣಿಯಾದ ಪಟ್ಟಣ ಸಹಕಾರ ಬ್ಯಾಂಕುಗಳು ಕಲಂ 69 ,70, 70ಎ, 71, 103 ಮತ್ತು 117 ನಿಯಮಗಳು 31 ಮತ್ತು 56. ದತ್ತವಾದ

ಅಧಿಕಾರದನ್ವಯ ತೀರ್ಮಾನ ಕೈಗೊಳ್ಳುವುದು, ಕ್ಷೇತ್ರ ಸಿಬ್ಬಂದಿಗಳಾಗಿ ಸಹಕಾರ ಅಭಿವೃದ್ಧಿ ಅಧಿಕಾರಿ, ಹಿರಿಯ ನಿರೀಕ್ಷಕರು, ಕಛೇರಿ ಅಧೀಕ್ಷಕರು, ಪ್ರಥಮ ದರ್ಜೆ ಸಹಾಯಕರು, ದ್ವಿತಿಯ ದರ್ಜೆಸಹಾಯಕರು, ಸಹಾಯಕರಾಗಿರುತ್ತಾರೆ. ಪತ್ರಗಳ ವಿಲೇವಾರಿಯು ವಿಷಯ ನಿರ್ವಾಹಕರಿಂದ ಪ್ರಾರಂಭವಾಗಿ, ಉಪ ನಿಬಂಧಕರ ತೀರ್ಮಾನಕ್ಕೆ ಸಲ್ಲಿಸಲ್ಪಡುತ್ತದೆ. ಕಡತಗಳ ನಿರ್ವಹಣೆ ಮಾಡುವ ಎಲ್ಲಾ ಸಿಬ್ಬಂದಿಗಳು ಅದರ ಚಾಲನೆಯಲ್ಲಿನ ಕ್ರಮಬದ್ಧತೆ ಮತ್ತು ಜವಾಬ್ದಾರಿಯಿಂದ ಹೊರಬರುವ ಫಲಿತಾಂಶವು ನಿರ್ವಹಿಸುವ ಕರ್ತವ್ಯಕ್ಕೆ ಅನುಗುಣವಾಗಿರುತ್ತದೆ.

8.02 ಉಪವಿಭಾಗದ ಸಹಾಯಕ ನಿಬಂಧಕರು, ಉತ್ತರ ವಲಯವೃತ್ತ ಬೆಂಗಳೂರು ಇವರ ಕಛೇರಿಯಲ್ಲಿ ಇಲಾಖೆಯ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಜವಾಬ್ದಾರರಾಗಿರುತ್ತಾರೆ. ಮತ್ತು ಇವರು ಅವರ ಕಛೇರಿಯ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಸಹಾಯಕ ಸಹಾಯಕ ನಿಬಂಧಕರು ತೆಗೆದುಕೊಳ್ಳುವ ಎಲ್ಲಾ ತೀರ್ಮಾನಗಳಿಗೆ ಅವರೇ ಜವಾಬ್ದಾರರಾಗಿರುತ್ತಾರೆ. ಜಿಲ್ಲಾ ಮಟ್ಟದ ಕಛೇರಿಯಂತೆಯೇ ಇವರ ಕಾರ್ಯನಿರ್ವಹಣೆಗೆ ಕ್ಷೇತ್ರ ಸಿಬ್ಬಂದಿಗಳು, ಲಿಪಿಕ ಸಿಬ್ಬಂದಿಗಳು ಹಾಗೂ ಮಾರಾಟಾಧಿಕಾರಿ(ಸರ್ಕಾರಿ) ಇವರು ಸಹಾಯಕರಾಗಿರುತ್ತಾರೆ. ಸಹಾಯಕ ನಿಬಂಧಕರು, ಉತ್ತರ ವಲಯ ವೃತ್ತದ ಹಂತದಲ್ಲಿ ಕರ್ತವ್ಯಗಳನ್ನು ನಿರ್ವಹಿಸಲು ಕ್ಷೇತ್ರ ಸಿಬ್ಬಂದಿಗಳು ಮತ್ತು ಕಛೇರಿ ಸಿಬ್ಬಂದಿಗಳು ಸಹಾಯಕರಾಗಿರುತ್ತಾರೆ. ವಿಷಯ ನಿರ್ವಾಹಕರು ಮತ್ತು ಮೇಲ್ವಿಚಾರಕ ಸಿಬ್ಬಂದಿಗಳು ಅವರುಗಳು ಕರ್ತವ್ಯ ನಿರ್ವಹಣೆಯ ಫಲಿತಾಂಶಕ್ಕೆ ಜವಾಬ್ದಾರರಾಗಿರುತ್ತಾರೆ. ಮತ್ತು ಮೇಲಧಿಕಾರಿಗಳಿಗೂ ಇದಕ್ಕೆ ಸಂಬಂಧಪಟ್ಟಂತೆ ಜವಾಬ್ದಾರಿ ಹೊಂದಿರುತ್ತಾರೆ.

ಇಲಾಖೆಯಲ್ಲಿ ಜಿಲ್ಲಾ ಮಟ್ಟದ ಕಛೇರಿಯಲ್ಲಿ ತನ್ನ ಕಾರ್ಯಗಳನ್ನು ನಿರ್ವಹಿಸಲು ರೂಪಿತವಾಗಿರುವ ಮಾರ್ಗಸೂಚಿಗಳು:

9.01 ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರಲ್ಲಿ ಇಲಾಖೆಯ ಪರಿಣಾಮಕಾರಿ ಕಾರ್ಯನಿರ್ವಹಣೆಗೆ ವಿವಿಧ ಹಂತಗಳನ್ನು ರೂಪಿಸಿದೆ. ಸಾಮಾನ್ಯವಾಗಿ ವ್ಯವಹಾರದ ಜರೂರು ವಿಲೇವಾರಿಗೆ ಅಂದರೆ ಕಾಲವಿಳಂಭಕ್ಕೆ ಯಾವುದೇ ಅವಕಾಶ ನೀಡದೇ ಆದ್ಯತೆಯ ಮೇಲೆ ಪತ್ರಗಳನ್ನು, ಕಡತಗಳನ್ನು ಮಂಡಿಸುವುದು, ತುರ್ತು ಮತ್ತು ಮುಖ್ಯವಾದ ಆದ್ಯತೆಯ ವಿಷಯವನ್ನು ಸಾಮಾನ್ಯವಾಗಿ ಅಂದಂದೇ ನಿರ್ವಹಿಸಲು ಅಗತ್ಯವಾದ ಕ್ರಮಗಳನ್ನು ಅನುಸರಿಸಲಾಗುವುದು.

9.02. ಪತ್ರಗಳ ಮತ್ತು ಕಡತಗಳ ವಿಲೇವಾರಿಗೆ , ಕಛೇರಿ ಕಾರ್ಯವಿಧಾನ ಕೈಪಿಡಿಯಲ್ಲಿ ರೂಪಿಸಿದ ಮಾರ್ಗಸೂಚಿಯಂತೆ ಪರಿಣಾಮಕಾರಿಯಾಗಿ ಪುನರ್ ವಿಲೋಕನ ಮತ್ತು ಶೀಘ್ರ ವಿಲೇವಾರಿಗೆ ಕಾರ್ಯನಿರ್ವಹಣೆಯನ್ನು ಗುರುತಿಸಲು ಅನುಪಾಲನಾ ಪದ್ಧತಿ ಜಾರಿಯಲ್ಲಿದೆ. ಕಛೇರಿಯ ಮಾರ್ಗಸೂಚಿಗಳ ಪ್ರಕಾರ, ಅವರವರ ಕಾರ್ಯಗಳನ್ನು ನಿರ್ವಹಿಸಲು ಮತ್ತು ಕರ್ತವ್ಯಗಳನ್ನು ಚುರುಕಾಗಿ ಪರಿಣಾಮಕಾರಿಯಾಗಿ ಮತ್ತು ಪಾರದರ್ಶಕವಾಗಿರುವುದು ಕಡ್ಡಾಯವಾಗಿದೆ.

9.03. ಉಪನಿಬಂಧಕರು ಅರೆನ್ಯಾಯಿಕ ಪ್ರಾಧಿಕಾರಿಗಳಾಗಿ ಸಹಕಾರ ಸಂಘಗಳಲ್ಲಿ, ಸೌಹಾರ್ದ ಸಹಕಾರಿಗಳಲ್ಲಿ, ಹಾಗೂ ಚೀಟಿನಿಧಿ ಕಾಯ್ದೆಯನ್ವಯ ಚೀಟಿಸಂಸ್ಥೆಗಳಲ್ಲಿ ಉದ್ಭವಿಸುವ ಮತ್ತು ದಾವೆಗೆ ಅದಕ್ಕೆ ಸಂಬಂಧಿಸಿದ ವಿಷಯಗಳನ್ನು ನ್ಯಾಯಾಲಯ ಕಲಾಪದ ಮೂಲಕ ಮತ್ತು ಇತರೆ ಅರೆ ನ್ಯಾಯಿಕ ವಿಷಯಗಳಂತೆ ಇರುವ ಪ್ರಕರಣಗಳನ್ನು ನಿಯಮಾನುಸಾರ ಮತ್ತು ನಿಗಧಿತ ಕ್ರಮಗಳನ್ನು ಅನುಸರಿಸಿ ವಿಲೇವಾರಿ ಮಾಡಲಾಗುವುದು.

9.04. ಉಪನಿಬಂದಕರಿಗೆ ದತ್ತವಾದ ಅಧಿಕಾರವನ್ನು ಚಲಾಯಿಸಲು ಸಂಬಂಧಪಟ್ಟಂತೆ ಸರ್ಕಾರವು ರೂಪಿಸಿರುವ ಮಾರ್ಗಸೂಚಿಗಳನ್ನು ಮತ್ತು ಕಚೇರಿ ಕಾರ್ಯ ವಿಧಾನ ಕೈಪಿಡಿಯನ್ವಯ ನಿರ್ದಿಷ್ಟಪಡಿಸಿರುವ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಅನುಸರಿಸಲಾಗುವುದು.

9.05. ನಿರ್ವಹಣೆ , ಜವಾಬ್ದಾರಿ, ಪಾರದರ್ಶಕತೆ ಮತ್ತು ಪರಿಣಾಮಕಾರಿ ಆಡಳಿತ ಇವುಗಳನ್ನು ಇಲಾಖೆಯು ಪ್ರಮುಖ ಮಾರ್ಗಸೂಚಿಗಳಾಗಿದ್ದು, ಇವುಗಳನ್ನು ಕಾನೂನುಬದ್ದವಾಗಿ ನಿಗಧಿಪಡಿಸಿರುವ ಮಾರ್ಗಸೂಚಿಗಳ ಜೊತೆಯಲ್ಲಿ ಅನುಸರಿಸಲಾಗುವುದು.

10.01 ಕಛೇರಿ ಸಿಬ್ಬಂದಿಗಳು ತಮ್ಮ ಕಾರ್ಯನಿರ್ವಹಣೆಯಲ್ಲಿ ಉಪಯೋಗಿಸುವ ನಿಯಮಗಳು, ನಿಯಂತ್ರಣಗಳು, ಸೂಚನೆಗಳು, ಮ್ಯಾನ್ಯೂಯಲ್ ಮತ್ತು ದಾಖಲೆಗಳು ಅಥವಾ ಅವುಗಳ ನಿಯಂತ್ರಣಗಳು.

ಉಪನಿಬಂಧಕರ ಕಛೇರಿಯ ಅಧಿಕಾರಿಗಳು, ಸಿಬ್ಬಂದಿಗಳು ಅಗತ್ಯವಾದ ದಾಖಲೆಗಳನ್ನು ಕೈಪಿಡಿಗಳನ್ನು ನಿರ್ವಹಿಸುತ್ತಿದ್ದಾರೆ.

1. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959.
2. ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960
3. ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997 ಮತ್ತು ನಿಯಮಗಳು 2004.
4. ಚೀಟಿ ನಿಧಿ ಕಾಯ್ದೆ, 1982 ಚೀಟಿ ನಿಧಿ(ಕರ್ನಾಟಕ)ನಿಯಮಗಳು 1983
5. ಗಿರವಿದಾರರ ಕಾಯ್ದೆ 1961 ಮತ್ತು ಗಿರವಿದಾರರ ನಿಯಮಗಳು 1966
6. .ಕರ್ನಾಟಕ ಲೇವಾದೇವಿಗಾರರ ಕಾಯ್ದೆ 1961 ಕರ್ನಾಟಕ ಲೇವಾದೇವಿಗಾರರ ನಿಯಮಗಳು 1965
7. ಇತರೆ.

10.**02** **ನಿರ್ವಹಿಸುವ ಇತರೆ ಶಾಸನ ಬದ್ದ ಕಾಯ್ದೆಗಳು, ನಿಯಮಗಳು**

1. ಕರ್ನಾಟಕ ನಾಗರಿಕ ಸೇವಾ ನಿಯಮಗಳು 1958
2. ಕರ್ನಾಟಕ ನಾಗರಿಕ (ವೈದ್ಯಕೀಯ ಹಾಜರಾತಿ)_ನಿಯಮಗಳು 1963
3. ಕರ್ನಾಟಕ ನಾಗರಿಕ (ಕಾಲಮಿತಿ ಬಡ್ತಿ) ನಿಯಮಗಳು
4. ಕರ್ನಾಟಕ ಆಯವ್ಯಯ ಕೈಪಿಡಿ
5. ಸಾದಿಲ್ವಾರು ವೆಚ್ಚದ ಕೈಪಿಡಿ
6. ಕರ್ನಾಟಕ ಆರ್ಥಿಕ ಸಂಹಿತೆ ಸಂಪುಟ–1 , ಸಂಪುಟ–2
7. ಕರ್ನಾಟಕ ನಾಗರೀಕ ಸೇವಾ (ಹಿರಿಯ ವೇತನ ಶ್ರೇಣಿಗೆ ಸ್ವಯಂಚಾಲಿತ ವಿಶೇಷ ಬಡ್ತಿ)ನಿಯಮಗಳು
8. ಸಿ.ಆ.ಸು.ಇಲಾಖೆಯು ಪ್ರಕಟಿಸಿರುವ ಸೇವಾ ನಿಯಮಗಳು
9. ಪ್ರಮುಖ ಸರ್ಕಾರಿ ಆದೇಶಗಳು , ಸರ್ಕಾರದ , ಸಿಆಸು ಮತ್ತು ಹಣಕಾಸು ಇಲಾಖೆಯು ಪ್ರಕಟಿತ ಮ್ಯಾನ್ಯಯಲ್

10. ಕರ್ನಾಟಕ ಸರ್ಕಾರಿ ನೌಕರರ ಸಮೂಹ ವಿಮಾ ಯೋಜನೆ ನಿಯಮಗಳು
11. ಕರ್ನಾಟಕ ಸರ್ಕಾರಿ ನೌಕರರ (ಪರೀಕ್ಷಾರ್ಥ ಅವಧಿ)ನಿಯಮಗಳು
12. ಕರ್ನಾಟಕ ನಾಗರೀಕ ಸೇವ (ನಡತೆ) ನಿಯಮಗಳು
13. ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲು ಸಹಿ) ನಿಯಮಗಳು
14. ಸಾಮಾನ್ಯ ಭವಿಷ್ಯ ನಿಧಿ ನಿಯಮಗಳು .

10.03 **ಕಛೇರಿಯಲ್ಲಿ ಕೆಳಕಂಡ ದಾಖಲಾತಿಗಳನ್ನು ನಿರ್ವಹಿಸಲಾಗುತ್ತಿದೆ**

1. ಸ್ವೀಕೃತಿ ವಹಿ(ಯಿಂದ ವಹಿ), ರವಾನೆ ವಹಿ (ಗೆ ವಹಿ) ಸ್ಥಳೀಯ ಬಟವಾಡೆ ವಹಿ
2. ಸಿಬ್ಬಂದಿಗಳ ಸೇವಾ ಪುಸ್ತಕಗಳು,
3. ಸಿಬ್ಬಂದಿಗಳ ಸೇವಾ ಪುಸ್ತಕದ ಚಲನಚಲನ ಚಹಿ, ಮುಕ್ತಾಯಗೊಂಡ ಸೇವಾಪುಸ್ತಕಗಳ ವಹಿ
4. ಸಿಬ್ಬಂದಿಗಳ ವಾರ್ಷಿಕ ವೇತನ ಬಡ್ತಿ ಪರಿಶೀಲನಾ ವಹಿ
5. ಸಿಬ್ಬಂದಿಗಳ ಕಾರ್ಯನಿರ್ವಹಣಾ ವರದಿಗಳ ಪರಿಶೀಲನಾವಹಿ
6. ಸಾಂದರ್ಭಿಕ ರಜೆ ವಹಿ

7 ನಗದು ಪುಸ್ತಕ , ವೇತನ ಬಟವಾಡೆ ಪುಸ್ತಕ,

8. ಸಾದಿಲ್ವಾರು ವೆಚ್ಚದ ಬಿಲ್ಲುಗಳ ವಹಿ , ಪ್ರಯಾಣ ಭತ್ಯೆ ಬಿಲ್ಲುಗಳ ವಹಿ
9. ಬಿಲ್ಲುಗಳ ನಗದು ಪರಿವರ್ತನೆ ವಹಿ(ಎನ್ ಕ್ಯಾಷ್‌ಮೆಂಟ್ ರಿಜಿಸ್ಟರ್) ಚಕ್ಕುಗಳ ವಹಿ ವಾಹನ ಲಾಗ್ ಪುಸ್ತಕ
10. ವಿಷಯ ವಹಿಗಳು , ವೈಯಕ್ತಿಕ ವಹಿಗಳು

11 ಸಿಬ್ಬಂದಿಗಳ ಚಲನ–ವಲನ ವಹಿ, ಕಛೇರಿ ಆದೇಶದ ವಹಿ

12. ಲೇವಾದೇವಿ/ಗಿರವಿದಾರರ ಪರವಾನಿಗೆ ,ಚೀಟಿ ನಿಧಿ, ಸಂಬಂಧಪಟ್ಟಂತೆ ವಹಿಗಳು.

13 ದಾಖಲೆಗಳ ವಹಿ ,ಇತ್ಯಾದಿ ಕಛೇರಿಯಲ್ಲಿ ಅವಶ್ಯಕವಾಗಿ ನಿರ್ವಹಿಸಬೇಕಾದ ವಹಿಗಳು

10.04 **ನಿರ್ವಹಿಸಲ್ಪಡುವ ಇತರೆ ಕಡತಗಳು/ದಾಖಲೆಗಳು**

1. ಸಹಕಾರ ಸಂಘಗಳ ನೋಂದಣಿ ವಹಿ
2. ನೋಂದಣಿಗೆ ಸಂಬಂಧಪಟ್ಟ ಕಡತಗಳು

3 ಮಹಾಸಭೆ ನಡೆಸುವ ಬಗ್ಗೆ ಕಡತಗಳು

4.ಹಣ ದುರುಪಯೋಗ ಪ್ರಕರಣಗಳ ಕಡತಗಳು

5.ಸಹಕಾರ ಸಂಘಗಳ ಆಡಳಿತ ಮಂಡಳಿ ರದ್ದತಿ ಕಡತಗಳು

6.ಯೋಜನಾ ಕಾರ್ಯಕ್ರಮಗಳ ಅನುಷ್ಠಾನದ ವಿವರಗಳ ಕಡತ.

7.ಪರಿವೀಕ್ಷಣೆ, ವಿಚಾರಣೆಗೆ ಆದೇಶಿಸಿರುವ ವಿವರಗಳ ವಹಿ, ಕಡತಗಳು

8..ವಿವಿಧ ಆಡಳಿತಾತ್ಮಕ ಮತ್ತು ಶಾಸನಾತ್ಮಕ ವಿಷಯಗಳಿಗೆ ಸಂಬಂಧಿಸಿದಂತೆ ತೆರೆಯಲಾದ ಕಡತಗಳು, ವಹಿಗಳು

9. ಇತರೆ ಮತ್ತು ಸಾಮಾನ್ಯ ವಿಷಯಗಳಿಗೆ ಸಂಬಂಧಿಸಿದಂತೆ ತೆರೆಯಲಾದ ಕಡತಗಳು ಮತ್ತು ವಹಿಗಳು, ದಾಖಲಾತಿಗಳು

10 ಅಧಿಕಾರಿಗಳು ನಡೆಸಿದ ಪರಿವೀಕ್ಷಣಾ ವರದಿಗಳು

11. ಕಛೇರಿ ಸಿಬ್ಬಂದಿಗಳ ರಜೆ, ವೇತನ ಬಡ್ತಿ, ಇತ್ಯಾದಿಗಳಿಗೆ ಸಂಬಂಧಪಟ್ಟಂತೆ ನೌಕರರ ವೈಯ್ಯಕ್ತಿಕ ಕಡತಗಳು

12. ಕಡತ ವಿಲೇವಾರಿ ವಹಿ,

13.ಇತರೆ ವಿಷಯಗಳ ಬಗ್ಗೆ ಕಾಲಿಕ ಪ್ರಗತಿ ತ:ಖ್ತೆಗಳು , ಪುನರ್ ವಿಲೋಕನ ಮತ್ತು ಇತರೆ ವ್ಯವಹಾರಿಕ ಕಡತಗಳು

14. ಆಡಳಿತ, ವ್ಯಾಜ್ಯ, ಲೇವಾದೇವಿ/ಗಿರವಿದಾರರ ಪರವಾನಿಗೆ ಸಂಬಂಧಪಟ್ಟಂತೆ ಚೀಟಿ ನಿಧಿ, ಪತ್ತು, ಪತ್ತೇತರ, ಗೃಹ, ಬಳಕೆ ಇತರೆ ಸಹಕಾರ ಸಂಘಗಳ ಬಗ್ಗೆ ಪ್ರಗತಿ, ಕಾರ್ಯನಿರ್ವಹಣೆ ಇತರೆ ವಿಷಯಗಳ ಪತ್ರ ವ್ಯವಹಾರದ ಕಡತಗಳು ಮತ್ತು ಸಂಬಂಧಿಸಿದ ಕಡತಗಳು

10.5 **ಕಛೇರಿಯ ನಿಯಂತ್ರಣದಲ್ಲಿ ಹೊಂದಿರುವ ದಾಖಲೆಗಳ ವರ್ಗಗಳ ತ:ಖ್ತೆ**

ಕಛೇರಿಯಲ್ಲಿ ನಿರ್ವಹಿಸಲ್ಪಟ್ಟಿರುವ ದಾಖಲೆಗಳ ವರ್ಗಗಳ ವಿವರಗಳನ್ನು ಈ ಕೈಪಿಡಿಯ ವಿವರದಂತೆ ನಮೂದಿಸಿದೆ. ಸದರಿ ಪಟ್ಟಿಯಲ್ಲದೆ ಕಛೇರಿ ಕೈಪಿಡಿಯಲ್ಲಿ ನಮೂದಿಸಿರುವಂತೆ ನಿರ್ದಿಷ್ಟಪಡಿಸಿರುವ ಅಗತ್ಯ ವಹಿಗಳನ್ನು ನಿರ್ವಹಿಸಿರುವುದನ್ನು ಸಹ ನಮೂದಿಸಿದೆ. ನಿರ್ಣಯಗಳಿಗೆ ಸಂಬಂಧಿಸಿದ ದಾಖಲೆಗಳು ಅವುಗಳ ಕಾರ್ಯನಿರ್ವಹಣೆ ಆಡಳಿತಾತ್ಮಕ/ಶಾಸನಬದ್ದ/ ಅರೆ ನ್ಯಾಯಿಕ ರೂಪವಾಗಿರುತ್ತದೆ. ಈ ದಾಖಲೆಗಳನ್ನು ವರ್ಗೀಕರಿಸಲಾಗಿದೆ. ಮತ್ತು ಆಡಳಿತ ನಿರ್ವಹಿಸಲ್ಪಟ್ಟಿದೆ.

10.6 ಕಛೇರಿಗೆ ಅರೆ ನ್ಯಾಯಿಕ ಜವಾಬ್ದಾರಿಯನ್ನು ವಹಿಸಿರುವುದರಿಂದ ಸದರಿ ಕಾರ್ಯನಿರ್ವಹಣೆಗೆ ಸೂಕ್ತ ಮತ್ತು ಅಗತ್ಯ ಶಾಸನಬದ್ಧ ಮಾರ್ಗಸೂಚನೆಗಳನ್ನು ಪಾಲಿಸಲಾಗುತ್ತಿದೆ. ನಿಯಮಗಳು, ನಿಯಂತ್ರಕಗಳು, ಮ್ಯಾನ್ಯುಯಲ್ ಮತ್ತು ಸರ್ಕಾರದ ಅಧಿಸೂಚನೆಗಳ ಮೂಲಕ ಇಲಾಖೆಯ ಮುಖ್ಯಸ್ಥರು ಹಾಗೂ ಮೇಲಧಿಕಾರಿಗಳ ಮಾರ್ಗದರ್ಶನವಿದೆ. ಆದಾಗ್ಯೂ ಕಛೇರಿಯ ಕಡ್ಡಾಯವಾಗಿ ಕಾಯ್ದೆ, ನಿಯಮಗಳು ಮತ್ತು ನಿಯಂತ್ರಕಗಳನ್ನು ಅನುಸರಿಸಿರುವುದರಿಂದ ಸಾರ್ವಜನಿಕರೊಂದಿಗೆ ಸಮಾಲೋಚಿಸುವ ಪದ್ಧತಿ ಇರುವುದಿಲ್ಲ.

10.7. ಮಂಡಳಿಗಳು, ಪರಿಷತ್ತುಗಳು, ಸಮಿತಿಗಳು ಮತ್ತು ಇತರೆ ಅಂಗ ರಚನೆಗಳು ಇಬ್ಬರು ಅಥವಾ ಹೆಚ್ಚು ಸದಸ್ಯರುಗಳನ್ನು ಅದರ ರಚನೆಯ ಭಾಗವಾಗಿ ಹೊಂದಿರುವುದು ಅಥವಾ ಅದಕ್ಕೆ ಮಾರ್ಗದರ್ಶನ ನೀಡುವ ಉದ್ದೇಶಕ್ಕಾಗಿ ಮತ್ತು ಅಂತಹ ಮಂಡಳಿಗಳು , ಪರಿಷತ್ತುಗಳ ಸಮಿತಿಗಳು ಮತ್ತು ಇತರೆ ಅಂಗ ರಚನೆಗಳ ಸಭೆಗಳಲ್ಲಿ ಸಾರ್ವಜನಿಕರಿಗೆ ಅವಕಾಶವಿದೆಯೇ? ಅಥವಾ ಅಂತಹ ಸಭೆಯ ನಡವಳಿಗಳು ಸಾರ್ವಜನಿಕರಿಗೆ ಲಭ್ಯವಿದೆಯೇ?

ಮಾರ್ಗದರ್ಶನ ನೀಡುವ ಉದ್ದೇಶಕ್ಕಾಗಿ ಇಲಾಖಾ ಕಛೇರಿಗಳಲ್ಲಿ ಅಂತಹ ಮಂಡಳಿಗಳು, ಪರಿಷತ್ತುಗಳು, ಸಮಿತಿಗಳು ಮತ್ತು ಇತರೆ ಅಂಗ ರಚನೆಗಳು ಇರುವುದಿಲ್ಲ.

11. **ಕಛೇರಿಯ ಅಧಿಕಾರಿಗಳ ಮತ್ತು ನೌಕರರ ಪಟ್ಟಿ**

ಕಛೇರಿಯ ಅಧಿಕಾರಿಗಳ ಮತ್ತು ನೌಕರರ ಯಾದಿಯನ್ನು ಈ ಕೈಪಿಡಿಯೊಂದಿಗೆ ಲಗತ್ತಿಸಿದೆ ಅನುಬಂಧ ' 2ಎ' ರಂತಿದೆ.

12. **ಕಛೇರಿಯ ಪ್ರತಿ ಅಧಿಕಾರಿ/ನೌಕರರ ಮಾಸಿಕ ಸಂಭಾವನೆ , ವಿವರಗಳು ಅದರ ನಿಯಂತ್ರಣದಲ್ಲಿನ ಅವಕಾಶದಂತೆ ಪರಿಹಾರದ ಪದ್ಧತಿಯಲ್ಲಿನ ಸಂಭಾವನೆಯಾ ಸೇರಿದಂತೆ:–**

ಸರ್ಕಾರವು ನಿಗಧಿಪಡಿಸಿರುವಂತೆ, ಅಧಿಕಾರಿಗಳು/ ನೌಕರರು ಮಾಸಿಕ ಸ್ವೀಕರಿಸುವ ಸಂಭಾವನೆ ವಿವರಗಳನ್ನು ಒಳಗೊಂಡಿರುವ ತ:ಖ್ತೆಯನ್ನು ಈ ಕೈಪಿಡಿಯ ಜೊತೆಗೆ ಲಗತ್ತಿಸಿರುವ ಅನುಬಂಧ 3 ರಲ್ಲಿದೆ. ಸರ್ಕಾರವು ಕಾಲಕಾಲಕ್ಕೆ ಹೊರಡಿಸಿರುವ ಸರ್ಕಾರಿ ಆದೇಶಗಳು/ ಅಧಿಸೂಚನೆಗಳನ್ವಯ ಇರುವ ಸಂಭಾವನೆಯನ್ನು ಈ ಅಧಿಕಾರಿಗಳು ಮತ್ತು ನೌಕರರು ಪಡೆಯುತ್ತಿದ್ದಾರೆ.

13. ಪ್ರತಿಯೊಂದು ಏಜೆನ್ಸಿಗೆ ಆಯವ್ಯಯ ಹಂಚಿಕೆ ಎಲ್ಲಾ ಯೋಜನೆಗಳ ವಿವರಗಳನ್ನು ನಮೂದಿಸುವುದು, ಉದ್ದೇಶಿತ ಖರ್ಚುಗಳು ಮತ್ತು ವಿತರಣೆ ಬಗ್ಗೆ ವರದಿ

2012–13ನೇ ಸಾಲಿನ ಆಯವ್ಯಯದ ಹಂಚಿಕೆ ಮತ್ತು ವೆಚ್ಚದ ವಿವರಗಳ ತ:ಖ್ತೆಗಳು ಲಗತ್ತಿಸಿರುವ ಅನುಬಂಧ 4 ರಂತಿದೆ.

14. **ಸಹಾಯಧನದ ಕಾರ್ಯಕ್ರಮಗಳ ಅನುಷ್ಟಾನದ ವಿಧಾನ, ಹಂಚಿಕೆಯಾದ ಮೊಬಲಗು ಸೇರಿದಂತೆ ಮತ್ತು ಅಂತಹ ಕಾರ್ಯಕ್ರಮದ ಫಲಾನುಭವಿಗಳ ವಿವರಗಳು;–**

ವಿವಿಧ ಯೋಜನೆಗಳು, ಕಾರ್ಯಕ್ರಮಗಳು, ಹಂಚಿಕೆ ಮತ್ತು ವೆಚ್ಚದ ವಿವರಗಳನ್ನು ಅನುಬಂಧ 5ಎ ಮತ್ತು 5ಬಿ ರಲ್ಲಿ ವಿವರಿಸಿದಂತಿದೆ.

14.01 ಹಾಗೂ ಸಹಾಯಧನ ಹಂಚಿಕೆ ಮಾಡಿರುವ ಮೊಬಲಗು, ಸರ್ಕಾರ ಇಲಾಖಾ ಮುಖ್ಯಸ್ಥರು, ಹಾಗೂ ಜಿಲ್ಲಾ ಪಂಚಾಯತ್ ಮಂಜೂರು ಮಾಡುತ್ತದೆ. ಅದನ್ನು ಡ್ರಾ ಮಾಡಿ ಫಲಾನುಭವಿ ಸಹಕಾರ ಸಂಘದ ಖಾತೆಗಳ ಮೂಲಕ ಜಮಾ ನೀಡಲಾಗುತ್ತಿದೆ.

15. **ರಿಯಾಯಿತಿಗಳನ್ನು ಸ್ವೀಕರಿಸಿರುವ ವಿವರಗಳು, ಅನುಮತಿಗಳು ಅಥವಾ ಮಂಜೂರು ಮಾಡಿರುವುದು.**

15.01 ಸಂಬಂಧಿಸಿದ ಯೋಜನೆಯ ಕಾರ್ಯಕ್ರಮದಲ್ಲಿ ನಿರ್ದಿಷ್ಟಪಡಿಸಿರುವ ಷರತು ಮತ್ತು ನಿಬಂಧನೆಗಳ ಪ್ರಕಾರ ಸ್ವೀಕರಿಸಿರುವವರು ಸಹಕಾರ ಸಂಘಗಳು/ ಸಹಕಾರ ರೈತ ಸದಸ್ಯರುಗಳು ಫಲಾನುಭವಿಗಳಾಗಿರುತ್ತಾರೆ. ಆದರೆ ಯಾವುದೇ ಅನುಮತಿ ನೀಡುವ ಯೋಜನೆಗಳಿರುವುದಿಲ್ಲ. ಇಲಾಖೆಯ ಕ್ರಿಯಾ ಯೋಜನೆಯ ಕಾರ್ಯಕ್ರಮದಲ್ಲಿ ಆರ್ಥಿಕ ನೆರವನ್ನು, ಷೇರು ಬಂಡವಾಳ ಸಾಲ ಮತ್ತು ಸಹಾಯಧನದ ರೂಪದಲ್ಲಿ ಅರ್ಹ ಸಹಕಾರ ಸಂಘಗಳಿಗೆ ನೀಡಲಾಗುತ್ತಿದೆ.

15.02 ಯೋಜನೆ: ಕಾರ್ಯಕ್ರಮಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರು, ಹಿಂದುಳಿದ ವರ್ಗದವರು ಮತ್ತು ಮಹಿಳೆಯವರು ಸಹಕಾರ ಸಂಘಗಳಲ್ಲಿ ಸದಸ್ಯರಾಗಲು ಆರ್ಥಿಕ ನೆರವು ನೀಡಲಾಗುತ್ತಿದೆ.

15.03 ಕೃಷಿ ಪತ್ತಿನ ಸಹಕಾರ ಸಂಸ್ಥೆಗಳಲ್ಲಿ ಸದಸ್ಯರಾಗಿದ್ದು, ಸಾಲ ಸೌಲಭ್ಯ ಪಡೆದಿರುವ ರೈತರುಗಳು ಸರ್ಕಾರವು ಕಾಲಕಾಲಕ್ಕೆ ಮಂಜೂರು ಮಾಡಿದಂತೆ ಬಡ್ಡಿ ಸಹಾಯಧನದ ರಿಯಾಯ್ತಿ ಪಡೆಯಲಿದ್ದಾರೆ. ರೈತರು , ಕೃಷಿ ಕಾರ್ಮಿಕರು ಇತರೆ ವರ್ಗದ ಸಹಕಾರ ಸಂಘಗಳಲ್ಲಿ ಸದಸ್ಯರಾಗಿದ್ದಲ್ಲಿ ಯಶಸ್ವಿನಿ ರೈತರ ಆರೋಗ್ಯ ರಕ್ಷಣಾ ವಿಮಾ ಯೋಜನೆಯಡಿಯಲ್ಲಿ ಲಭ್ಯವಾಗುವ ಸೌಲಭ್ಯವನ್ನು ಪಡೆಯಲು ಅರ್ಹರಿದ್ದಾರೆ.

16. **ಗ್ರಂಥಾಲಯದ ಕಾರ್ಯ ನಿರ್ವಹಣೆಯ ಅವಧಿಯು ಸೇರಿದಂತೆ ಮಾಹಿತಿ ಪಡೆಯಲು ನಾಗರೀಕರಿಗೆ ಸಿಗುವ ಸವಲತ್ತುಗಳ ವಿವರಗಳು ಮತ್ತು ಓದುವ ಕೊಠಡಿ ಸಾರ್ವಜನಿಕ ಉಪಯೋಗಕ್ಕೆ ನಿರ್ವಹಿಸಿದ್ದಲ್ಲಿ;–**

16.01 ಕಛೇರಿಯಲ್ಲಿ ಗ್ರಂಥಾಲಯದ ಓದುವ ಕೊಠಡಿ ನಿರ್ವಹಿಸಿರುವುದಿಲ್ಲ. ಯಾವುದೇ ಸಾರ್ವಜನಿಕರು ಯಾವುದೇ ಮಾಹಿತಿಯನ್ನು ಪಡೆಯಲು ಕಾರ್ಯ ನಿರತ ದಿನಗಳಲ್ಲಿ ಕಛೇರಿಯ ಮುಖ್ಯಸ್ಥರನ್ನು ಅಥವಾ ಈ ಉದ್ದೇಶಕ್ಕೆ ನಿಯತಗೊಂಡ ಸಹಾಯಕ ಅಧಿಕಾರಿಗಳನ್ನು ಸಂಪರ್ಕಿಸಬಹುದು. ಸಾರ್ವಜನಿಕರಿಗೆ ಅಗತ್ಯವಾದ ವಿಷಯಗಳನ್ನು ನಿರ್ವಹಿಸಲ್ಪಡುವ ಶಾಖೆಗಳ ಮಾಹಿತಿಗಳ ಬಗ್ಗೆ ಮಾರ್ಗದರ್ಶನ ನೀಡಲಾಗುವುದು ಮತ್ತು ಯಾವುದೇ ಅಗತ್ಯ ದಾಖಲೆ/ ಮಾಹಿತಿಗಳಿಗಾಗಿ ಅರ್ಜಿ ಸಲ್ಲಿಸಿದಲ್ಲಿ ಅಂತಹ ದಾಖಲೆ .ಮಾಹಿತಿಗಳನ್ನು ನಿಗದಿತ ಅವಧಿಯೊಳಗೆ ಒದಗಿಸಲು ಕ್ರಮವಿಡಲಾಗುವುದು. ಸಾರ್ವಜನಿಕರು, ಸಂದರ್ಶನಕ್ಕೆ ನಿಗಧಿಯಾಗಿರುವ ಸಮಯದಲ್ಲಿ ಕಾರ್ಯನಿರತ ದಿನಗಳಲ್ಲಿ ಅಧಿಕಾರಿಗಳು ಅಧಿಕೃತವಾಗಿ ಕೇಂದ್ರ ಸ್ಥಾನದಲ್ಲಿರುವಾಗ ಮುಕ್ತವಾಗಿ ಅಧಿಕಾರಿಗಳನ್ನು ಭೇಟಿ ಮಾಡಬಹುದು.

17. ಸಹಕಾರ ಸಂಘಗಳ ಉಪನಿಬಂಧಕರು, ಉತ್ತರ ವಲಯ, ಬೆಂಗಳೂರು ನಗರ ಜಿಲ್ಲೆ ಬೆಂಗಳೂರು ಇವರ ಕಛೇರಿಯಲ್ಲಿ ಮಾಹಿತಿ ಅಧಿಕಾರಿಗಳ ವಿವರ ಇಂತಿದೆ.

ಸಾರ್ವಜನಿಕ ಮಾಹಿತಿ ಅಧಿಕಾರಿ:

ಸಹಕಾರ ಸಂಘಗಳ ಉಪನಿಬಂಧಕರು

ಉತ್ತರ ವಲಯ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ:

ಅಧೀಕ್ಷಕರು,

ಸಹಕಾರ ಸಂಘಗಳ ಉಪನಿಬಂಧಕರ ಕಛೇರಿ,

ಉತ್ತರ ವಲಯ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.

ಮೇಲ್ಮನವಿ ಪ್ರಾಧಿಕಾರ:

ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು, ಬೆಂಗಳೂರು ಪ್ರಾಂತ, ಬೆಂಗಳೂರು

ಸಾರ್ವಜನಿಕ ಮಾಹಿತಿ ಅಧಿಕಾರಿ

ಹಾಗೂ ಸಹಕಾರ ಸಂಘಗಳ ಉಪನಿಬಂಧಕರು

ಉತ್ತರ ವಲಯ, ಬೆಂಗಳೂರು ನಗರ ಜಿಲ್ಲೆ,

ಅನುಬಂಧ–1 ಸಿಬ್ಬಂದಿಗಳ ಕರ್ತವ್ಯ ಹಂಚಿಕೆ ಪಟ್ಟಿ

ಕ್ರ. ಸಂ.	ಅಧಿಕಾರಿ ನೌಕರರ ಹೆಸರು ಮತ್ತು ಪದನಾಮ ಶ್ರೀಮತಿ/ಶ್ರೀ		
1	ಕೆ. ಗೋವಿಂದಸ್ವಾಮಿ/ಅಧೀಕ್ಷಕರು	ಎಸ್–1	ಸಿಬ್ಬಂದಿ, ನೋಂದಣಿ ಮತ್ತು ಸಿಬ್ಬಂದಿ ಮೇಲ್ವಿಚಾರಣೆ
2	ಮಂಜುಳ/ಸಹಕಾರ ಅಭಿವೃದ್ಧಿ ಅಧಿಕಾರಿ,	ಎಸ್–2	ಸಹಕಾರ ಸಂಘಗಳ ಆಡಳಿತ, ಅಂಕಿ–ಅಂಶ, ಇತರೆ
3	ಟಿ. ಜಯಶೇಖರ್/ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು	ಎಸ್–3	ಚೀಟಿನಿಧಿ, ಸಹಕಾರ ಕಾಯ್ದೆ ಕಲಂ 64, 65 ರ ಪ್ರಕರಣಗಳು
4	ಎಂ. ಲಿಯಾಖತ್ ಆಲಿಖಾನ್ /ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು	ಎಸ್–4	ಗೃಹ ನಿರ್ಮಾಣ ಸಹಕಾರ ಸಂಘಗಳ ಕಡತ, ಮಾಸಿಕ, ತ್ರೈಮಾಸಿಕ, ಸಭೆಗಳ ಮಾಹಿತಿ
5	ಸರಸ್ವತಿ .ಎಲ್/ಪ್ರಥಮ ದರ್ಜೆ ಸಹಾಯಕರು	ಎಸ್–5	ಕಛೇರಿ ಲೆಕ್ಕ ನಗದು ನಿರ್ವಹಣೆ ಇತ್ಯಾದಿ
6	ಬಿ. ಶಶಿಕಲಾ/ಸಹಕಾರ ಅಭಿವೃದ್ಧಿ ಅಧಿಕಾರಿ,	ಎಸ್–5ಎ	ಚೀಟಿ ವ್ಯಾಜ್ಯ ಮತ್ತು ಇತರೆ
7	ಎನ್. ಚಂದ್ರಶೇಖರ್/ಸಹಕಾರ ಸಂಘಗಳ ನಿರೀಕ್ಷಕರು	ಎಸ್–6	ಚೀಟಿನಿಧಿ ವ್ಯಾಜ್ಯ, ಲೇವಾದೇವಿ, ಹಣಕಾಸು ಸಂಸ್ಥೆಗಳು, ದೂರು ಅರ್ಜಿ ವಿಲೇವಾರಿ ಮತ್ತು ಆಡಿಟ್
8	ಟಿ.ಡಿ. ಉಮೇಶ್/ಪ್ರಥಮ ದರ್ಜೆ ಸಹಾಯಕರು	ಎಸ್–7 & 8	ವ್ಯಾಜ್ಯ, ಯೋಜನೆ, ಸಮಾಪನೆ, ಯಶಸ್ವಿನಿ ರೈತರ ಆರೋಗ್ಯ ವಿಮಾ ರಕ್ಷಣಾ ಯೋಜನೆ, ಪತ್ತು, ಪತ್ತೇತರ, ಬಿಡಿಪಿ
9	ಕೆ. ಚಂದ್ರಶೇಖರ್/ದ್ವಿತೀಯ ದರ್ಜೆ ಸಹಾಯಕರು	ಎಸ್–9	ಮಹಾಸಭೆ, ಸಹಕಾರ ಸಂಘಗಳ ಚುನಾವಣೆ, ಕಛೇರಿಯ ಸ್ವೀಕೃತಿ ಮತ್ತು ರವಾನೆ.
10	ಎಸ್.ಎ. ಶೈಲಜ/ಹಿರಿಯ ಬೆರಳಚ್ಚುಗಾರರು	ಎಸ್–10	ಗಣಕಯಂತ್ರ, ಫ್ಯಾಕ್ಸ್, ಜೆರಾಕ್ಸ್ ಯಂತ್ರಗಳ ನಿರ್ವಹಣೆ ಮತ್ತು ಕಾರ್ಯನಿರ್ವಹಣಾ ಆಪ್ತ ಶಾಖೆ.

ಅನುಬಂಧ–2ಎ ಸಹಕಾರ ಸಂಘಗಳ ಉಪ ನಿಬಂಧಕರು, ಉತ್ತರ ವಲಯ, ಬೆಂಗಳೂರು ನಗರ ಜಿಲ್ಲೆ ರವರ ಕಛೇರಿ,

ಕ್ರ. ಸಂ.	ಅಧಿಕಾರಿ/ನೌಕರರ ಹೆಸರು ಮತ್ತು ಹುದ್ದೆ ಶ್ರೀಯುತರು/ಶ್ರೀಮತಿ	ಹುಟ್ಟಿದ ದಿನಾಂಕ ಮತ್ತು ಸ್ವಂತ ಜಿಲ್ಲೆ	ಸರ್ಕಾರಿ ಸೇವೆಗೆ ಸೇರಿದ ದಿನಾಂಕ	ಪ್ರಸ್ತುತ ವೃಂದಕ್ಕೆ ನೇಮಕವಾದ ದಿನಾಂಕ:	ಹಾಲಿ ಕಾರ್ಯನಿರ್ವಹಿಸುತ್ತಿರುವ ಹುದ್ದೆ	ಕಲಂ 6 ರ ಹುದ್ದೆಯಿಂದ ಬಿಡುಗಡೆಯಾದ ದಿನಾಂಕ:	ಹಾಲಿ ಕೇಂದ್ರ ಸ್ಥಳದಲ್ಲಿ ಯಾವ ದಿನಾಂಕದಿಂದ
1	ಡಿ. ಪಾಂಡುರಂಗ ಗರಗ್ **ಸಹಕಾರ ಸಂಘಗಳ ಉಪ ನಿಬಂಧಕರು,**	05–06–1961 ಚಿತ್ರದುರ್ಗ	10–03–1997	01–01–2006	ಸಹಕಾರ ಸಂಘಗಳ ಉಪ ನಿಬಂಧಕರು, ದಿನಾಂಕ: 12–6–2009	–	12–06–2009
2	ಬಿ. ಶಶಿಕಲಾ **ಸಹಕಾರ ಅಭಿವೃದ್ಧಿ ಅಧಿಕಾರಿ,**	05–07–1961 ಬೆಂಗಳೂರು	30–12–1988	05–11–2007	ಸಹಕಾರ ಅಭಿವೃದ್ಧಿ ಅಧಿಕಾರಿ, ದಿನಾಂಕ: 5–7–2012	–	05–07–2012
3	ಮಂಜುಳ **ಸಹಕಾರ ಅಭಿವೃದ್ಧಿ ಅಧಿಕಾರಿ,**	09–09–1963 ಉಡುಪಿ	09–01–1989	30–7–2008	ಸಹಕಾರ ಅಭಿವೃದ್ಧಿ ಅಧಿಕಾರಿ, ದಿನಾಂಕ: 30–6–2012	–	09–01–1989
4	ಕೆ. ಗೋವಿಂದಸ್ವಾಮಿ **ಅಧೀಕ್ಷಕರು**	12–07–1958 ಮೈಸೂರು	23–03–1984	24–11–2009	ಅಧೀಕ್ಷಕರು, ದಿನಾಂಕ: 12–03–2010	–	12–03–2010
5	ಟಿ. ಜಯಶೇಖರ್, **ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು**	10–7–1965 ಚಿತ್ರದುರ್ಗ	21–10–1988	24–11–2009	ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು, ದಿನಾಂಕ:27–11–2009	–	09–07–2003

ಕ್ರ. ಸಂ.	ಅಧಿಕಾರಿ/ನೌಕರರ ಹೆಸರು ಮತ್ತು ಹುದ್ದೆ ಶ್ರೀಯುತರು/ಶ್ರೀಮತಿ	ಹುಟ್ಟಿದ ದಿನಾಂಕ ಮತ್ತು ಸ್ವಂತ ಜಿಲ್ಲೆ	ಸರ್ಕಾರಿ ಸೇವೆಗೆ ಸೇರಿದ ದಿನಾಂಕ	ಪ್ರಸ್ತುತ ವೃಂದಕ್ಕೆ ನೇಮಕವಾದ ದಿನಾಂಕ:	ಹಾಲಿ ಕಾರ್ಯನಿರ್ವಹಿಸುತ್ತಿರುವ ಹುದ್ದೆ	ಕಲಂ 6 ರ ಹುದ್ದೆಯಿಂದ ಬಿಡುಗಡೆಯಾದ ದಿನಾಂಕ:	ಹಾಲಿ ಕೇಂದ್ರ ಸ್ಥಳದಲ್ಲಿ ಯಾವ ದಿನಾಂಕದಿಂದ
6	ಎಂ. ಲಿಯಾಖತ್ ಆಲಿಖಾನ್, **ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು**	15–05–1975 ತುಮಕೂರು	23–09–1993	09–07–2010	ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು, ದಿನಾಂಕ: 25–04–2011	–	23–09–1993
7	ಟಿ.ಡಿ. ಉಮೇಶ್ **ಪ್ರಥಮ ದರ್ಜೆ ಸಹಾಯಕರು**	14–04–1961 ಬೆಂಗಳೂರು	12–07–1985	30–06–2011	ಪ್ರಥಮ ದರ್ಜೆ ಸಹಾಯಕರು, ದಿನಾಂಕ: 02–07–2011	–	04–07–1991
8	ಸರಸ್ವತಿ ಎಲ್ **ಪ್ರಥಮ ದರ್ಜೆ ಸಹಾಯಕರು**	01–05–1964 ಬೆಂಗಳೂರು	30–08–1985	30–06–2011	ಪ್ರಥಮ ದರ್ಜೆ ಸಹಾಯಕರು, ದಿನಾಂಕ: 04–07–2011	–	30–08–1985
9	ಎನ್. ಚಂದ್ರಶೇಖರ್ **ಸಹಕಾರ ಸಂಘಗಳ ನಿರೀಕ್ಷಕರು**	ಸೇವಾ ಪುಸ್ತಕ ಸ್ವೀಕೃತವಾಗಿಲ್ಲ			ಸಹಕಾರ ಸಂಘಗಳ ನಿರೀಕ್ಷಕರು ದಿನಾಂಕ: 12–08–2013	–	12–08–2013
10	ಎಸ್.ಎ. ಶೈಲಜ **ಹಿರಿಯ ಬೆರಳಚ್ಚುಗಾರರು**	03–05–1954 ಶಿವಮೊಗ್ಗ	25–07–1985	19–09–2005	ಹಿರಿಯ ಬೆರಳಚ್ಚುಗಾರರು, ದಿನಾಂಕ: 03–09–2009	–	23–06–2003
11	ಕೆ. ಚಂದ್ರಶೇಖರ **ದ್ವಿತೀಯ ದರ್ಜೆ ಸಹಾಯಕರು**	16–02–1973 ಮಂಡ್ಯ	04–10–1997	05–11–2007	ದ್ವಿತೀಯ ದರ್ಜೆ ಸಹಾಯಕರು ದಿನಾಂಕ:12–11–2007	–	04–10–1997
12	ಎ. ಮುನಿಯಪ್ಪ **ಡ್ರೈವರ್**	25–08–1957 ಬೆಂಗಳೂರು	21–11–1984	27–05–1993	ಡ್ರೈವರ್, ದಿನಾಂಕ: 05–07–1994	–	05–07–1994

ಅನುಬಂಧ–2ಬಿ

ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಉತ್ತರ ವಲಯ ವೃತ್ತ, ಬೆಂಗಳೂರು ರವರ ಕಛೇರಿಯ ಸಿಬ್ಬಂದಿ ವಿವರ

ಕ್ರ. ಸಂ.	ಅಧಿಕಾರಿ/ನೌಕರರ ಹೆಸರು ಮತ್ತು ಹುದ್ದೆ ಶ್ರೀಯುತರು/ಶ್ರೀಮತಿ	ಹುಟ್ಟಿದ ದಿನಾಂಕ ಮತ್ತು ಸ್ವಂತ ಜಿಲ್ಲೆ	ಸರ್ಕಾರಿ ಸೇವೆಗೆ ಸೇರಿದ ದಿನಾಂಕ	ಪ್ರಸ್ತುತ ವೃಂದಕ್ಕೆ ನೇಮಕವಾದ ದಿನಾಂಕ:	ಹಾಲಿ ಕಾರ್ಯನಿರ್ವಹಿಸುತ್ತಿರುವ ಹುದ್ದೆ	ಕಲಂ 6 ರ ಹುದ್ದೆಯಿಂದ ಬಿಡುಗಡೆಯಾದ ದಿನಾಂಕ:	ಹಾಲಿ ಕೇಂದ್ರ ಸ್ಥಳದಲ್ಲಿ ಯಾವ ದಿನಾಂಕದಿಂದ
1	ಎನ್. ವೆಂಕಟೇಶ್ **ಸಹಕಾರ ಸಂಘಗಳ ಸಹಾಯಕ ನಿಬಂಧಕರು,**	16–05–1967 ಕೋಲಾರ	02–02–1999	24–02–2006	ಸಹಕಾರ ಸಂಘಗಳ ಸಹಾಯಕ ನಿಬಂಧಕರು,	–	15–06–2009
2	ಹೊಂಬೇಗೌಡ ಬಿ.ಇ. **ಸಹಕಾರ ಅಭಿವೃದ್ಧಿ ಅಧಿಕಾರಿ,**	03–05–1960 ಮಂಡ್ಯ	11–07–1985	12–10–2009	ಮಾರಾಟಾಧಿಕಾರಿ, (ಸರ್ಕಾರ)	–	01–07–1985

ಕ್ರ. ಸಂ.	ಅಧಿಕಾರಿ/ನೌಕರರ ಹೆಸರು ಮತ್ತು ಹುದ್ದೆ ಶ್ರೀಯುತರು/ಶ್ರೀಮತಿ	ಹುಟ್ಟಿದ ದಿನಾಂಕ ಮತ್ತು ಸ್ವಂತ ಜಿಲ್ಲೆ	ಸರ್ಕಾರಿ ಸೇವೆಗೆ ಸೇರಿದ ದಿನಾಂಕ	ಪ್ರಸ್ತುತ ವೃಂದಕ್ಕೆ ನೇಮಕವಾದ ದಿನಾಂಕ:	ಹಾಲಿ ಕಾರ್ಯನಿರ್ವಹಿಸುತ್ತಿರುವ ಹುದ್ದೆ	ಕಲಂ 6 ರ ಹುದ್ದೆಯಿಂದ ಬಿಡುಗಡೆಯಾದ ದಿನಾಂಕ:	ಹಾಲಿ ಕೇಂದ್ರ ಸ್ಥಳದಲ್ಲಿ ಯಾವ ದಿನಾಂಕದಿಂದ
3	ರಂಗಧಾಮಯ್ಯ **ಸಹಕಾರ ಅಭಿವೃದ್ಧಿ ಅಧಿಕಾರಿ,**	17–05–1954 ಬೆಂಗಳೂರು	24–06–1985	07–06–2010	ಮಾರಾಟಾಧಿಕಾರಿ, (ನಿಯಮ 441) ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್, ಬೆಂಗಳೂರು	–	24–06–2003
4	ಬಸಮ್ಮ ಹೆಚ್ ದೊಡ್ಡಗೌಡ್ರ **ಅಧೀಕ್ಷಕರು**	01–06–1981	08–10–2004	24–11–2009	ಅಧೀಕ್ಷಕರು,	–	03–12–2009
5	ಸುಂದರರಾಜು ಜಿ.ಟಿ **ಸಹಕಾರ ಸಂಘಗಳ ನಿರೀಕ್ಷಕರು**	05–07–1973 ರಾಮನಗರ	30–11–2009	24–11–2009	ಸಹಕಾರ ಸಂಘಗಳ ನಿರೀಕ್ಷಕರು,	–	30–11–2009
6	ಗುರುಪ್ರಸಾದ್, **ಸಹಕಾರ ಸಂಘಗಳ ನಿರೀಕ್ಷಕರು**	27–10–1982 ಬೆಂಗಳೂರು	30–11–2009	24–11–2009	ಸಹಕಾರ ಸಂಘಗಳ ನಿರೀಕ್ಷಕರು	–	30–11–2009
7	ಎನ್. ರಾಧಾಮಣಿ **ದ್ವಿತೀಯ ದರ್ಜೆ ಸಹಾಯಕರು**	05–04–1964 ಕೋಲಾರ	04–08–2006	22–07–2006	ದ್ವಿತೀಯ ದರ್ಜೆ ಸಹಾಯಕರು	–	04–08–2006
8	ಎಸ್. ಚನ್ನಕೇಶವ **ದ್ವಿತೀಯ ದರ್ಜೆ ಸಹಾಯಕರು**	25–08–1956 ಚಿಕ್ಕಮಗಳೂರು	20–01–1986	05–04–2006	ದ್ವಿತೀಯ ದರ್ಜೆ ಸಹಾಯಕರು	–	15–07–2011
9	ಎ.ಎನ್. ಸುವರ್ಣದೇವಿ **ದ್ವಿತೀಯ ದರ್ಜೆ ಸಹಾಯಕರು**	6–4–1974 ತುಮಕೂರು	18–02–2000	11–10–2012	ದ್ವಿತೀಯ ದರ್ಜೆ ಸಹಾಯಕರು	–	02–11–2001
10	ಸುಮಂಗಲ ಎಸ್. ಶಿದ್ರಾಶೆಟ್ಟಿ **ಬೆರಳಚ್ಚುಗಾರರು**	20–06–1968 ಧಾರವಾಡ	20–01–2000	12–01–2000	ಬೆರಳಚ್ಚುಗಾರರು	–	01–07–2010
11	ಪಿ. ಲೋಕೇಶ **ಜಾರಿಗಾರರು**	28–03–1976 ಬೆಂಗಳೂರು	13–03–1997	06–03–1997	ಜಾರಿಗಾರರು	–	13–03–1997

ಅನುಬಂಧ–3 ದಿನಾಂಕ: 31–08–2013 ಕ್ಕೆ ಅಧಿಕಾರಿ/ಸಿಬ್ಬಂದಿಗಳ ವೇತನ ಭತ್ಯೆಗಳ ವಿವರಗಳು

ಕ್ರ. ಸಂ.	ಅಧಿಕಾರಿ ನೌಕರರ ಹೆಸರು ಮತ್ತು ಪದನಾಮ ಶ್ರೀಮತಿ/ಶ್ರೀ	ಗ್ರೂಪ್	ಲಿಂಗ	ವೇತನ ಶ್ರೇಣಿ	ವೇತನ	ಒಟ್ಟು ಸಂಬಳ
1	ಡಿ. ಪಾಂಡುರಂಗ ಗರಗ್/ಸಹಕಾರ ಸಂಘಗಳ ಉಪ ನಿಬಂಧಕರು,	ಎ	ಪುರುಷ	36300–53850	43200–00	60488–00
2	ಬಿ. ಶಶಿಕಲಾ/ಸಹಕಾರ ಅಭಿವೃದ್ಧಿ ಅಧಿಕಾರಿ,	ಬಿ	ಸ್ತ್ರೀ	21600–40050	26700–00	37013–00
3	ಮಂಜುಳ/ಸಹಕಾರ ಅಭಿವೃದ್ಧಿ ಅಧಿಕಾರಿ,	ಬಿ	ಸ್ತ್ರೀ	21600–40050	27400–00	38486–00
4	ಕೆ. ಗೋವಿಂದಸ್ವಾಮಿ/ಅಧೀಕ್ಷಕರು	ಸಿ	ಪುರುಷ	20000–36300	26000–00	36665–00

ಕ್ರ. ಸಂ.	ಅಧಿಕಾರಿ ನೌಕರರ ಹೆಸರು ಮತ್ತು ಪದನಾಮ ಶ್ರೀಮತಿ/ಶ್ರೀ	ಗ್ರೂಪ್	ಲಿಂಗ	ವೇತನ ಶ್ರೇಣಿ	ವೇತನ	ಒಟ್ಟು ಸಂಬಳ
5	ಟಿ. ಜಯಶೇಖರ್/ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು	ಸಿ	ಪುರುಷ	17650–32000	21600–00	30474–00
6	ಎಂ. ಲಿಯಾಖತ್ ಆಲಿಖಾನ್ /ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು	ಸಿ	ಪುರುಷ	17650–32000	19000–00	26860–00
7	ಎನ್. ಚಂದ್ರಶೇಖರ್/ಸಹಕಾರ ಸಂಘಗಳ ನಿರೀಕ್ಷಕರು	ಸಿ	ಪುರುಷ	14550–26700	ಎಲ್.ಪಿ.ಸಿ. ಸ್ವೀಕೃತವಾಗಿಲ್ಲ.	
8	ಟಿ.ಡಿ. ಉಮೇಶ್/ಪ್ರಥಮ ದರ್ಜೆ ಸಹಾಯಕರು	ಸಿ	ಪುರುಷ	14550–26700	20500–00	28945–00
9	ಸರಸ್ವತಿ .ಎಲ್/ಪ್ರಥಮ ದರ್ಜೆ ಸಹಾಯಕರು	ಸಿ	ಸ್ತ್ರೀ	14550–26700	21600–00	30474–00
10	ಎಸ್.ಎ. ಶೈಲಜ/ಹಿರಿಯ ಬೆರಳಚ್ಚುಗಾರರು	ಸಿ	ಸ್ತ್ರೀ	14550–26700	24000–00	34020–00
11	ಕೆ. ಚಂದ್ರಶೇಖರ್/ದ್ವಿತೀಯ ದರ್ಜೆ ಸಹಾಯಕರು	ಸಿ	ಪುರುಷ	11600–2100	15600–00	22209–00
12	ಎ. ಮುನಿಯಪ್ಪ/ಡ್ರೈವರ್	ಸಿ	ಪುರುಷ	14550–26700	19000–00	27295–00

ಅನುಬಂಧ–4 2012–13ನೇ ಸಾಲಿನ ಕಛೇರಿಯ ಯೋಜನೇತರ ವೆಚ್ಚ ವಿವರಗಳು

1. ಸಹಕಾರ ಸಂಘಗಳ ಉಪ ನಿಬಂಧಕರು, ಉತ್ತರ ವಲಯ, ಬೆಂಗಳೂರು ನಗರ ಜಿಲ್ಲೆ ಲೆಕ್ಕ ಶೀರ್ಷಿಕೆ: 2425–00–001–0–01

1	**ಯೋಜನೇತರ ಸಿಬ್ಬಂದಿ ವೆಚ್ಚ**	**2010–11ನೇ ಸಾಲಿನಲ್ಲಿ ಒಟ್ಟು ರೂ.**		
		02 ಅಧಿಕಾರಿಗಳ ವೇತನ	387583	
		003 ಸಿಬ್ಬಂದಿ ವೇತನ	2842222	
		011–ತುಟ್ಟಿಭತ್ಯೆ	428477	
		014–ಇತರೆ	1893664	
		ಒಟ್ಟು	**4598018**	
2	**ಯೋಜನೇತರ ವೆಚ್ಚಗಳು ಟಿಎ,ಓಇ,ಆರ್.ಆರ್.ಟಿ**	**ಹಂಚಿಕೆ ರೂ.**	**ವೆಚ್ಚ ರೂ.**	**ಉಳಿತಾಯ ರೂ.**
	041–ಪ್ರಮಾಣ ವೆಚ್ಚ	3000	1590	1410
	051–ಸಾದಿಲ್ವಾರು ವೆಚ್ಚ	91000	90965	35
	052–ದೂರವಾಣಿ ವೆಚ್ಚ	18000	18000	–
	071–ಕಟ್ಟಡ ವೆಚ್ಚ	686000	622828	63172
	195–ಸಾರಿಗೆ ವೆಚ್ಚ	97400	97400	ಇಲ್ಲ
	125–ಸಾಮಾನ್ಯ ವೆಚ್ಚ	4024	3918	106

ಅನುಬಂಧ–5ಎ							
ರಾಜ್ಯ ಯೋಜನೆ (2012–13)							
ಕ್ರ. ಸಂ.	ವಿವರ		ವಾರ್ಷಿಕ ಗುರಿ		ಒಟ್ಟಾರೆ ಪ್ರಗತಿ		
			ಭೌತಿಕ	ಆರ್ಥಿಕ	ಭೌತಿಕ	ಆರ್ಥಿಕ	
1	ಹಿಂದುಳಿದ ವರ್ಗದ/ಅಲ್ಪಸಂಖ್ಯಾತ ವರ್ಗದ ವ್ಯಕ್ತಿಗಳನ್ನು ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ನೋಂದಾಯಿಸಲು ಸಹಾಯಧನ		750 ಜನರು	1.00	600	1.00	
2	ಪ.ಜಾ/ಪ.ಪಂ, ಹಿಂದುಳಿದ ವರ್ಗದ/ಅಲ್ಪಸಂಖ್ಯಾತರ ಸಹಕಾರ ಸಂಘಗಳಿಗೆ ಸಹಾಯಧನ (ಹೊಸ ಯೋಜನೆ)		2	1.50	0	0.00	
ಅನುಬಂಧ–5ಬಿ							
ಜಿಲ್ಲಾ ಪಂಚಾಯತ್ ಯೋಜನೆ (2012–13)							
1	ಡಿ–1	ವಿವಿಧ ವರ್ಗದ ಸಹಕಾರ ಸಂಘಗಳಿಗೆ ಸಹಾಯಧನ	5	0.50	5	0.50	
2	ಡಿ–2	ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳಿಗೆ ಮೂಲಭೂತ ಸೌಕರ್ಯ	5	2.70	5	2.70	
3	ಡಿ–3	ವಿವಿಧ ವರ್ಗದ ಸಹಕಾರ ಸಂಘಗಳಿಗೆ ಶಾಖೆಗಳನ್ನು ತೆರೆಯಲು ಹಾಗೂ ಕಟ್ಟಡ ನಿರ್ಮಾಣ ಮಾಡಲು ಆರ್ಥಿಕ ನೆರವು	4	2.00	4	2.00	
4	ಡಿ–4	ವಿವಿಧ ವರ್ಗದ ಸಹಕಾರ ಸಂಘಗಳಿಗೆ ಷೇರು ಬಂಡವಾಳದ ಸಹಾಯಧನ	6	3.00	6	3.00	
5	ಡಿ–5	ವಿವಿಧ ವರ್ಗದ ಸಹಕಾರ ಸಂಘಗಳಿಗೆ ಸಾಲದ ನೆರವು	5	2.50	5	2.50	
		ಒಟ್ಟು	25	10.70	25	10.70	
ತಾಲ್ಲೂಕು ಪಂಚಾಯತ್ ಯೋಜನೆ (2012–13)							
1	ಡಿ–10	ಪಿಕಾರ್ಡ್ ಬ್ಯಾಂಕುಗಳ ಆಸ್ತಿ ಸೃಷ್ಠಿಗಾಗಿ ನೀಡುವ ಪರಿಶಿಷ್ಟ ಜಾತಿಯವರಿಗೆ ಮಂಜೂರು ಮಾಡುವ ದೀರ್ಘಾವಧಿ ಸಾಲಗಳ ಮೇಲೆ ಶೇ. 60% ಸಹಾಯಧನ	1	3.25	1	3.25	
2	ಡಿ–11	ಮಹಿಳಾ ಸಹಕಾರ ಸಂಘಗಳಲ್ಲಿ ಹೂಡಿಕೆಗಳು	3	0.75	3	0.75	
3	ಡಿ–12	ಪಿಕಾರ್ಡ್ ಬ್ಯಾಂಕುಗಳ ಮಂಜೂರು ಮಾಡುವ ಸಾಲಗಳಿಗೆ ಹೆಚ್ಚುವರಿ ಷೇರಿಗಾಗಿ ಪರಿಶಿಷ್ಟ ಜಾತಿಯವರಿಗೆ ಬಡ್ಡಿ ರಹಿತ ಸಾಲ	1	0.25	1	0.25	

ಸಾರ್ವಜನಿಕ ಮಾಹಿತಿ ಅಧಿಕಾರಿ
ಹಾಗೂ ಸಹಕಾರ ಸಂಘಗಳ ಉಪನಿಬಂಧಕರು
ಉತ್ತರ ವಲಯ, ಬೆಂಗಳೂರು ನಗರ ಜಿಲ್ಲೆ,

PR.2348
SC.20

FORM No.155
(See Rule-329)
(MEMBERS VOLUNTARY WINDING UP)
Name of The Company: Asia Eco Environmental Technologies private Limited
Notice Convening Final Meeting of Contributories

Notice is hereby given in pursuance of section 497 of the Companies Act, 1956 that a general meeting of the members of the above named company wil l be held at the Registered office of the Company at No.260, 1st Floor, 6th C Main Road H M T Layout, R T Nagar, Bangalore-560032 on Wednesday, the 15th day of January 2014 at 11.00 A.M. for the purpose off having an account laid before them showing the manner in which the winding up has been conducted and the property of the company disposed of and of hearing any explanation that may be given by the liquidator and also of determining by a special resolution of the company, the manner in which the books, accounts and documents of the company and of the liquidator shall be disposed off.

Dated this 22nd day of October, 2013

PD.133
SC.5

For Asia Eco Environmental Technologies Pvt .Ltd.,
S. RAVISHANKAR
LIQUIDATOR

IN THE COURT OF 11th A.C. M.M. COURT, MAYO HALL, BANGALORE CITY.

It is here by notified to the public that the Kottanur Police Station Bangalore city have seized the following vehicles as unclaimed and such vehicles are lying in the Police Station as unclaimed so far. Hence the owners of the properties & vehicles may put their claim one month from the date of this publication.

Bangalore city

Dated: 7-10-2013

By order of the court
11th A.C. M.M. Mayohall, Bangalore

List of unclaimed vehicles are lying in Kottanur Police Station, Bangaloare city which have been seized under cases.

SL NO	P.F. No	CR.MIS	VEHICLE & REG NO	ENGINE NO	CHASSIS NO
01	80/2009	C-MISC No 277/2009	BAJAJ PULSAR KA-05, EN-77	DHGBJL41429	DHV13JL41394
02	10/2013	C-MISC No 143/2013	TVS SCOOTY PEP KA-05 EQ-3630	OGIN3204919	MD624G1232N50295
03	42/2013	C-MISC No 195/2013	TVS XL HEAVY DUTY KA-02, EW-8849	OD1L61838184	MD621BD1462L24823
04	43/2013	C-MISC No 196/2013	BAJAJ PULSAR KL-24, 4619	DHGPE27982	MD20HDZZPCE88977
05	44/2013	C-MISC No 197/2013	BAJAJ LEGEND KA-05, ED-4721	28EBGD60315	28CBGD59938
06	48/2013	C-MISC No 199/2013	HERO HONDA SPLENDOR KA-04, EZ-6021	04D15E25598	04D16F24721
07	49/2013	C-MISC No 200/2013	KINETIC ZX ZOOM KA-03, L-4626	488181	498533
08	50/2013	C-MISC No 201/2013	BAJAJ SUZUKI KA-01, Q-6155	780M169229	7809F122028
09	54/2013	C-MISC No 203/2013	HERO HONDA SPLENDOR PLUS KA-03, Y-5730	99L17E01954	99L19702273
10	55/2013	C-MISC No 204/2013	PASSANGER AUTO KA-01 A-314	24MBDE32479	24FBDF18553
11	56/2013	C-MISC No 205/2013	BAJAJ SUNNY KA-03, S-526,	33M96D50000	33F96050033
12	57/2013	C-MISC No 206/2013	BAJAJ CHETAK KA-03, Q-2559	06M95F40522	06F95F10436

SL NO	P.F. No	CR.MIS	VEHICLE & REG NO	ENGINE NO	CHASSIS NO
13	58/2013	C-MISC No 207/2013	BAJAJ BOXER KA-04, EB-7486	DFMBHK77013	DFFBHK57917
14	59/2013	C-MISC No 208/2013	PASSANGER AUTO KA-04 7591	24M96089661	24F96C88867
15	60/2013	C-MISC No 209/2013	YAMAHA RED COLOUR	-	-
16	61/2013	C-MISC No 210/2013	TVS VICTOR GX KA-07, L-755	OF1A71569766	MD625AF1171A52477

PR.2307
SC.10

By order of the court
11th A.C. M.M. Mayohall, Bangalore

IN THE COURT OF 1st M.M. TRAFFIC, MAYOHALL, BANGALORE CITY.

It is here by notified to the public that the Kottanur Police Station Bangalore city have seized the following vehicles as unclaimed and such vehicles are lying in the Police Station as unclaimed so far. Hence the owners of the properties & vehicles may put their claim one month from the date of this publication.

By order of the court
RANGE GOWDA
SHERISTHEDAR
M.M.T.C.-1

List of unclaimed vehicles are lying in Kottanur Police Station, Bangaloare city which have been seized under cases.

SL NO	P.F. No	CR.NO & Sec	VEHICLE & REG NO	CHASSIS NO	ENGINE NO	C.C. No AND DATE OF DISPOSSAL
01	P.F,No 43/2010	Cr.No.64/ 2011 u/s 98 K.p Act	Hero puch two wheeler Black Coulour KA 09 U-791	No:XC719054	EB713968	C.C. No 1096/2011, Dt:25/01/2012
02	P.F,No 43/2010	-Do-	2)Yamaha Two wheeler Black Coulour KA 03 V-7762	98AIL3007955	No:IL3007955	C.C. No 1096/2011, Dt:25/01/2012
03	P.F,No 44/2010	-Do-	1). TVS Super KA 09 K-3540 Green Coulour	P13D5F775961	P1305N766722	C.C. No 1096/2011, Dt:25/01/2012

By order of the court
RANGE GOWDA
SHERISTHEDAR
M.M.T.C.-1

IN THE COURT OF 1st M.M. TRAFFIC, MAYOHALL, BANGALORE CITY.

It is here by notified to the public that the Kottanur Police Station Bangalore city have seized the following vehicles as unclaimed and such vehicles are lying in the Police Station as unclaimed so far. Hence the owners of the properties & vehicles may put their claim one month from the date of this publication.

By order of the court
RANGE GOWDA
SHERISTHEDAR
M.M.T.C.-1

List of unclaimed vehicles are lying in Kottanur Police Station, Bangaloare city which have been seized under cases.

SL NO	P.F. No	CR.NO & Sec	VEHICLE & REG NO	CHASSIS NO	ENGINE NO	C.C. No AND DATE OF DISPOSSAL
01	P.F,No 20/2010	Cr.No.65/ 2011 u/s 98 K.p Act	TVS VICTOR GLX, KA-05, HB-5883	MD625DF4361L8122	AF4L61014351	C.C. No 1095/2011, Dt:16/07/2012

By order of the court
RANGE GOWDA
SHERISTHEDAR
M.M.T.C.-1

PR.2302
SC.10